**ಕರ್ನಾಟಕ ಸಾಹಿತ್ಯ ಅಕಾಡೆಮಿ**


ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು – ೫೬೦ ೦೦೨
ದೂರವಾಣಿ : ೨೨೧೧ ೬೪೬೦
ಫ್ಯಾಕ್ಸ್ : ೦೮೦–೨೨೨೧ ೧೭೩೦
www.karnatakasahithyaacademy.org


# ವಾರ್ತಾಪತ್ರ

ದ್ವೈಮಾಸಿಕ ಪತ್ರಿಕೆ


**ಸಂಚಿಕೆ : ೫೪**
**ಜುಲೈ–ಆಗಸ್ಟ್ – ೨೦೦೯**

*ಪ್ರಧಾನ ಸಂಪಾದಕರು*
**ಪ್ರೊ. ಎಂ.ಎಚ್. ಕೃಷ್ಣಯ್ಯ**

*ಸಂಪಾದಕರು*
**ಆರ್. ವಸಂತ್‌ಕುಮಾರ್**
**ಎಂ.ಡಿ. ತ್ರಿಲೋಚನ ಒಡೆಯರ್**

*ಪ್ರಕಾಶಕರು*
**ವಿ.ಎನ್. ಮಲ್ಲಿಕಾರ್ಜುನಸ್ವಾಮಿ**
ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ

*ಮುಖಪುಟ ಚಿತ್ರ*
**ಸಿ. ಚಂದ್ರಶೇಖರ್**

*ಮುದ್ರಕರು*
**ಇಳಾ ಮುದ್ರಣ**
ಬೆಂಗಳೂರು – ೫೬೦ ೦೨೬
ದೂರವಾಣಿ : ೨೬೭೫ ೭೧೫೯


## ಪರಿವಿಡಿ


- **ಜುಲೈ ಮತ್ತು ಆಗಸ್ಟ್ ತಿಂಗಳಲ್ಲಿ ಜರುಗಿದ ಕಾರ್ಯಕ್ರಮಗಳ ವರದಿ** ... ೩
- **ಗೌರವ ಪ್ರಶಸ್ತಿ ಪುರಸ್ಕೃತರು** ... ೫
- **ಪತ್ರಿಕಾ ಮಾರ್ದನಿಗಳು** ... ೭
- **ಜಿ.ಎಸ್.ಎಸ್. ಅವರಿಗೆ 'ನೃಪತುಂಗ ಸಾಹಿತ್ಯ ಪ್ರಶಸ್ತಿ'ಯ ಗರಿ** ... ೧೭




**ಜಮಖಂಡಿಯಲ್ಲಿ ಜರುಗಿದ ಗೌರವ ಪ್ರಶಸ್ತಿ ಪ್ರದಾನ ಸಂದರ್ಭದಲ್ಲಿ ಕಂಡುಬಂದ ಆಕರ್ಷಕ ಮೆರವಣಿಗೆ**



**ಗೌರವ ಪ್ರಶಸ್ತಿ ಪ್ರದಾನ ಸಂದರ್ಭದಲ್ಲಿ ಮಾತನಾಡುತ್ತಿರುವ ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ**



**ಪುಸ್ತಕ ಬಹುಮಾನ ಪ್ರಶಸ್ತಿ ಸ್ವೀಕರಿಸಿ ಮಾತನಾಡುತ್ತಿರುವ ಪ್ರೊ. ಎಸ್.ಜಿ. ಸಿದ್ಧರಾಮಯ್ಯ**

# ಅಕಾಡೆಮಿಯು ಹಮ್ಮಿಕೊಂಡಿದ್ದ ಕಾರ್ಯಕ್ರಮಗಳ ಕಿರುನೋಟ

**ಕ**ನ್ನಡ ಸಾಹಿತ್ಯ ಕ್ಷೇತ್ರವನ್ನು ಹಲವಾರು ನೆಲೆಗಳಲ್ಲಿ ಶ್ರೀಮಂತ ಗೊಳಿಸಿರುವ ಸಾಹಿತಿಗಳನ್ನು ಗುರುತಿಸಿ ಅವರಿಗೆ ವಾರ್ಷಿಕ ಪ್ರಶಸ್ತಿಗಳನ್ನು ನೀಡಿ ಗೌರವಿಸುವ ಸಾಂಸ್ಕೃತಿಕ ಹೊಣೆಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ನಿರ್ವಹಿಸುತ್ತಾ ಬಂದಿದೆ. ಪ್ರತಿವರ್ಷ ಅವರ ಸಮಗ್ರ ಸಾಹಿತ್ಯ ಸೇವೆಯನ್ನು ಗಮನಿಸಿ ಪ್ರಮುಖ ಲೇಖಕ ಲೇಖಕಿಯರನ್ನು ಈ ಗೌರವ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಅಕಾಡೆಮಿಯು ಆರಂಭವಾದಾಗಿನಿಂದ ಈವರೆಗೆ ೨೩೩ ಲೇಖಕ ಲೇಖಕಿಯರಿಗೆ ಗೌರವ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

೨೦೦೮ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಸಮಾರಂಭವು ೨೮ ಜುಲೈ ೨೦೦೯ರಂದು ಬಾಗಲಕೋಟೆ ಜಿಲ್ಲೆ ಜಮಖಂಡಿಯಲ್ಲಿ ಅದ್ದೂರಿಯಾಗಿ ಜರುಗಿತು. ಅಂದು ಜಮಖಂಡಿಯಲ್ಲಿ ಸಾಹಿತಿಗಳ ಜಾತ್ರೆಯೇ ನೆರೆದಿತ್ತು. ಇಡೀ ನಗರದಲ್ಲಿ ಹಬ್ಬದ ವಾತಾವರಣ ಕಂಡುಬಂದಿತು. ವಿದ್ಯುತ್‌ದೀಪ ಹಾಗೂ ತಳಿರು ತೋರಣಗಳಿಂದ ಬೀದಿಗಳು ಅಲಂಕೃತಗೊಂಡಿದ್ದವು. ಜಮಖಂಡಿಯ ಸಾಹಿತ್ಯ ಪರಂಪರೆಯನ್ನು ಶ್ರೀಮಂತಗೊಳಿಸಿದ ಮಹನೀಯರ ಹೆಸರುಗಳನ್ನು ಪ್ರವೇಶದ್ವಾರಗಳಿಗೆ ಇಡಲಾಗಿತ್ತು. ಪಾರಿಜಾತ ಕಲಾವಿದರ ಹಾಡುಗಳು ಅಲ್ಲಿ ನೆರೆದಿದ್ದ ಸಭಿಕರ ಮನಸೂರೆಗೊಂಡವು. ಕಾರ್ಯಕ್ರಮಕ್ಕೂ ಮೊದಲು ಜಮಖಂಡಿಯ ಎ.ಜಿ. ದೇಸಾಯಿ ವೃತ್ತದಿಂದ ಬಸವ ಭವನದ ವರೆಗೆ ಎಲ್ಲಾ ಪ್ರಶಸ್ತಿ ವಿಜೇತರನ್ನು ಕರಡಿ ಮಜಲು, ಡೊಳ್ಳಿನ ವಾದ್ಯದ ಸಮೇತ ಮೆರವಣಿಗೆಯಲ್ಲಿ ಕರೆತರಲಾಯಿತು.

ಅಲಂಕೃತಗೊಂಡ ವೇದಿಕೆಯಲ್ಲಿ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಪ್ರೊ॥ ಬರಗೂರು ರಾಮಚಂದ್ರಪ್ಪ, ಅಕಾಡೆಮಿಯ ಸದಸ್ಯ ಡಾ॥ ಬಾಳಾ ಸಾಹೇಬ ಲೋಕಾಪುರ ಹಾಗೂ ಅಕಾಡೆಮಿಯ ಸದಸ್ಯೆ ಶಾರದಾ ಮುಳ್ಳೂರ ಹಾಜರಿದ್ದರು, ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಪ್ರೊ॥ ಎಂ.ಎಚ್. ಕೃಷ್ಣಯ್ಯ ಅವರು ಅಧ್ಯಕ್ಷತೆ ವಹಿಸಿದರು.

ನೆರೆದಿದ್ದ ಸಭಿಕರು ಹಾಗೂ ಮುಖ್ಯ ಅತಿಥಿಗಳ ಸಮ್ಮುಖದಲ್ಲಿ ೨೦೦೮ನೇ ಸಾಲಿನ ಗೌರವ ಪ್ರಶಸ್ತಿ ಪುರಸ್ಕಾರಕ್ಕೆ ಪಾತ್ರರಾದ ಪ್ರೊ॥ ಎಚ್.ಎಂ. ಬೀಳಗಿ, ಶ್ರೀ ವಿಷ್ಣುನಾಯ್ಕ, ಪ್ರೊ॥ ಮಲ್ಲಿಕಾರ್ಜುನ ಹಿರೇಮಠ ಮತ್ತು ಶ್ರೀ ಲಕ್ಷ್ಮಣ್ ಹಾಗೂ ಪ್ರೊ॥ ಅ.ರಾ.ಮಿತ್ರ (ಹಾಜರಿರಲಿಲ್ಲ) ಇವರುಗಳಿಗೆ ಗೌರವ ಪ್ರಶಸ್ತಿ ಮತ್ತು ೨೦೦೭ನೆಯ ಸಾಲಿನ ಪುಸ್ತಕ ಬಹುಮಾನಕ್ಕೆ ಆಯ್ಕೆಯಾದ ಬಸವರಾಜ ವಕ್ಕುಂದ (ಒಡೆಯಲಾರದ ಪ್ರತಿಮೆ) ನೇಮಿಚಂದ್ರ (ಯಾದ್ ವಶೇಮ್) ಮುಹಮ್ಮದ್ ಕುಳಾಯಿ (ನನ್ನ ಇನ್ನಷ್ಟು ಕತೆಗಳು) ಪ್ರೊ॥ ಎಸ್.ಜಿ. ಸಿದ್ಧರಾಮಯ್ಯ (ದಾಳ) ಪ್ರೊ॥ ಎಚ್.ಎಲ್. ಕೇಶಮೂರ್ತಿ (ದೇವರುಗಳ ಟೈಮೇ ಸರಿ ಇಲ್ಲ) ಸಂಗಮೇಶ ಕೋಟಿ (ದುಬೈ ಎಂಬ ಮಾಯಾನಗರಿ) ಡಾ॥ ಗಣೇಶ ಅಮೀನಗಡ (ಬಣ್ಣದ ಬದುಕಿನ ಚಿನ್ನದ ದಿನಗಳು, ಡಿ.ಎಸ್. ನಾಗಭೂಷಣ (ಕುವೆಂಪು ಸಾಹಿತ್ಯ ದರ್ಶನ) ಪ್ರೊ॥ ಎಸ್. ಉಮಾಪತಿ (ನಂದಪ್ಪದೇವರ ಪ್ರಭುಚರಿತ್ರೆ) ನಾ.ಸು. ಭರತನಹಳ್ಳಿ (ರೊಬೋಟೋ ಮತ್ತು ಚಿಹ್ನೆಗಳು) ನಾಗೇಶ ಹೆಗಡೆ (ಆಚಿನ ಲೋಕಕ್ಕೆ ಕಾಲಕೋಶ) ಡಾ॥ ಹಾಲತಿ ಸೋಮಶೇಖರ (ಮಹಿಳಾ ಚಳವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ), ಷ.ಶೆಟ್ಟರ್ (ಶಂಗಂ ತಮಿಳರಂ ಮತ್ತು ಕನ್ನಡನಾಡು–ನುಡಿ) ಪ್ರೊ॥ ಚಂದ್ರಕಾಂತ ಪೋಕಳೆ (ನೆಲವೆದ್ದು ಒಡೆಯಿತು) ಡಾ॥ ಪಿ.ವಿ. ನಾರಾಯಣ (ಅಧಿಕಾರ ಮೀಮಾಂಸೆ) ಸಿ.ಎಚ್. ಹನುಮಂತರಾಯ (ವಕೀಲರೊಬ್ಬರ ವಗೈರೆಗಳು), ಬಸವರಾಜ ಹೂಗಾರ (ತತ್ರಾಣಿ) ಪಿ.ಸಿ. ಅಂತೋಣಿ ಸ್ವಾಮಿ (Origin of ehristianity in and Around Srirangapattana) ಹೀಗೆ ಸುಮಾರು ಹದಿನೆಂಟು ಪುಸ್ತಕ ಬಹುಮಾನ ಪುರಸ್ಕೃತರಿಗೆ ಪ್ರಶಸ್ತಿ ವಿತರಿಸಲಾಯಿತು.

ಪ್ರಶಸ್ತಿ ಪ್ರದಾನದ ನಂತರ ಮಾತನಾಡಿದ ಪ್ರೊ॥ ಬರಗೂರು ರಾಮಚಂದ್ರಪ್ಪನವರು "೨೦೦೫ರಲ್ಲಿ ರೂಪಿಸಿದ ನಿಯಮಗಳ ಮೂಲಕ ಅಕಾಡೆಮಿಗಳ ಅಧಿಕಾರವನ್ನು ಮೊಟಕುಗೊಳಿಸಿ ಸರಕಾರ ಹೇರಿರುವ ನಿಯಂತ್ರಣ ಅತಿಕ್ರಮವಾಗಿದ್ದು, ಇದರಿಂದ ಸಾಂಸ್ಕೃತಿಕ ಸ್ವಾಯತ್ತತೆಗೆ ಪೂರ್ತಿ ಪೆಟ್ಟು ಬಿದ್ದಂತಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು, ಅಕಾಡೆಮಿಯ ಸಿಬ್ಬಂದಿ ಕೂಲಿಗಾಗಿ ಕೆಲಸ ಮಾಡುವಂತಹ ಸ್ಥಿತಿ ನಿರ್ಮಾಣವಾಗಿದ್ದು ಅವರ ಸೇವೆ ಕೂಡಾ ಖಾಯಂ ಆಗದಿರುವುದು ಸಾಂಸ್ಕೃತಿಕ ಕಾಳಜಿಗೆ ಕೊಟ್ಟ ಪೆಟ್ಟಾಗಿದೆ ಎಂದು ದೂರಿದರು. ಧರ್ಮ ಮತ್ತು ಯುದ್ಧಗಳು ಇಂದು ಉದ್ಯಮವಾಗಿದೆ, ಎಂದು ಎಚ್ಚರಿಕೆ ಮಾತುಗಳನ್ನಾಡಿದ ಪ್ರೊ॥ ಬರಗೂರು ರಾಮಚಂದ್ರಪ್ಪ ಸಾಂಸ್ಕೃತಿಕ ಸ್ಥಿತ್ಯಂತರದ ಮೂಲಕ ಸಾಂಸ್ಕೃತಿಕ ನಾಯಕತ್ವವನ್ನು ದೊರಕಿಸುವ ಕೆಲಸ ಸಾಹಿತ್ಯದಿಂದಾಗಲಿ ಎಂದು ಅವರು ಹಾರೈಸಿದರು.

ಅದೇ ವೇದಿಕೆಯಲ್ಲಿ ಗೌರವ ಪ್ರಶಸ್ತಿ ಪುರಸ್ಕೃತರ ಸಾಹಿತ್ಯಕ ಸಾಧನೆ ಕುರಿತ ವಿಚಾರ ಸಂಕೀರ್ಣ ಏರ್ಪಡಿಸಲಾಗಿತ್ತು. ಪ್ರೊ॥ ಅ.ರಾ. ಮಿತ್ರ ಅವರ ಸಾಹಿತ್ಯವನ್ನು ಕುರಿತು ಡಾ॥ ಬಿ.ವಿ. ವಸಂತ ಕುಮಾರ್ ಮಾತನಾಡಿ "ಅ.ರಾ. ಮಿತ್ರ ಹಾಸ್ಯ ಸಾಹಿತ್ಯವನ್ನು ಕೇವಲ ಹರಟೆ ಕಾಲಹರಣಕ್ಕಾಗಿ ಮಾತ್ರ ಬರೆಯದೆ ಜೀವನದ ಭಾಷ್ಯ ತಿಳಿಸಲು ಬಳಸಿದ್ದು ಶ್ರೇಷ್ಠವೆನಿಸಿದೆ ಎಂದರು.

ಪ್ರೊ॥ ಎಂ.ಎಚ್. ಬೀಳಗಿ ಅವರ ಸಾಹಿತ್ಯ ಸಾಧನೆ ಕುರಿತು

ಮಾತನಾಡಿದ ಡಾ॥ ಶಾಂತ ಇಮ್ರಾಪುರ ಜಾನಪದ ಮತ್ತು ರಿವಾಯತ್ ಪದಗಳ ರಚನೆ ಮೂಲಕ ಮನೆ ಮಾತಾಗಿಸಿದ ಮಹಿಳಾ ಸಾಹಿತಿ ಪ್ರೊ॥ ಬೀಳಗಿ ಅವರು ಎಂದರು. ಸ್ವಾತಂತ್ರ್ಯ ಪೂರ್ವದಲ್ಲಿ ಮಹಿಳೆಯರಿಗೆ ಅಕ್ಷರ ಕ್ರಾಂತಿ ಗೌಣವೆನಿಸಿದರೂ ಕೂಡ ಮುಸ್ಲಿಂ ಸಮಾಜದ ಮಹಿಳೆಯಾಗಿದ್ದುಕೊಂಡು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಛಾಪು ಒತ್ತಿದವರು ಎಂದು ಹೇಳಿದರು.

ಪ್ರೊ॥ ಮಲ್ಲಿಕಾರ್ಜುನ ಹಿರೇಮಠರ ಸಾಹಿತ್ಯಕ ಸಾಧನೆ ಕುರಿತು ಡಾ॥ ವಿಜಯಕುಮಾರ್ ಕಟಗಿಹಳ್ಳಿ ಮಠ ಮಾತನಾಡಿ ಬಹುತೇಕ ಸಾಹಿತಿಗಳು ಕವಿತೆ ಬರೆಯುವ ಮೂಲಕ ಸಾಹಿತ್ಯ ಕ್ಷೇತ್ರ ಪ್ರವೇಶಿಸುವರು. ಆದರೆ ಹಿರೇಮಠರು ಅಲೆಮಾರಿ ಹಾಗೂ ಶೋಷಿತ ವರ್ಗದವರ ಬಗ್ಗೆ ಬರೆದು ಸಾಹಿತ್ಯ ಪ್ರವೇಶಿಸಿದರು ಎಂದರು.

ಲಕ್ಷ್ಮಣ್ ಅವರ ಸಾಹಿತ್ಯಕ ಸಾಧನೆ ಕುರಿತು ಡಾ॥ ವಡ್ಡಗೆರೆ ನಾಗರಾಜಯ್ಯ ಮಾತನಾಡಿ ನಿಜ ಜೀವನದ ಸಂಗತಿಗಳನ್ನು ಲಕ್ಷ್ಮಣ್ ತಮ್ಮ ಸಾಹಿತ್ಯದಲ್ಲಿ ಅಳವಡಿಸಿದರು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅಂಬಾತನಯ ಮುದ್ರಾಡಿ ಪ್ರಶಸ್ತಿ ಪುರಸ್ಕೃತ ವಿಷ್ಣುನಾಯ್ಕ ಅವರನ್ನು ಕುರಿತು ಮಾತನಾಡಿ ಸಾಹಿತ್ಯ ಕ್ಷೇತ್ರಕ್ಕೆ ವಿಷ್ಣುನಾಯ್ಕ ಅವರ ಸೇವೆ ಅನನ್ಯ ಎಂದರು ಕಾರ್ಯಕ್ರಮದ ನಂತರ ರೇಣುಕಾ ಮಾಲಾಪುರ ತಂಡದಿಂದ ಶ್ರೀಕೃಷ್ಣ ಪಾರಿಜಾತ ಹಾಡುಗಾರಿಕೆ ನಡೆಯಿತು.

## ಗೋಕಾಕ್ ಜನ್ಮಶತಾಬ್ದಿ ಕಾರ್ಯಕ್ರಮ

೨ ಆಗಸ್ಟ್ ೨೦೦೮ರಂದು ಜ್ಞಾನಪೀಠ ಪುರಸ್ಕೃತ ವಿನಾಯಕ ಕೃಷ್ಣ ಗೋಕಾಕರ ಜನ್ಮಶತಾಬ್ದಿ ಕಾರ್ಯಕ್ರಮವನ್ನು ಬೆಂಗಳೂರಿನ ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ ಹಮ್ಮಿಕೊಂಡಿತ್ತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಭಾರತೀಯ ವಿದ್ಯಾಭವನದ ಅಧ್ಯಕ್ಷ ಎನ್. ರಾಮಾನುಜಂ, ಪ್ರೊ॥ ಎಲ್.ಎಸ್. ಶೇಷಗಿರಿರಾವ್ ಮತ್ತು ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ॥ ಯು.ಆರ್. ಅನಂತಮೂರ್ತಿ, ಅಕಾಡೆಮಿ ಅಧ್ಯಕ್ಷರಾದ ಪ್ರೊ॥ ಎಂ. ಎಚ್. ಕೃಷ್ಣಯ್ಯ, ನ್ಯಾಯಮೂರ್ತಿ ರಾಮಾಜೋಯಿಸ್ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಮನುಬಳಿಗಾರ್ ಹಾಗೂ ಗೋಕಾಕರ ಪುತ್ರಿ ಯಶೋಧರಾ ಹಾಜರಿದ್ದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಜಿ.ಎಸ್.ಶಿವರುದ್ರಪ್ಪ "ರಾಷ್ಟ್ರಕವಿ ಕುವೆಂಪು ಅವರ 'ವಿಶ್ವಮಾನವ ಕಲ್ಪನೆಗಿಂತ ಮುಂಚೆಯೇ ವಿ.ಕೃ. ಗೋಕಾಕ್ ಆ ಶಬ್ದ ಪರಿಚಯಿಸಿದರು ಎಂದರು. ಗೋಕಾಕ್ ನವೋದಯ ಸಾಹಿತ್ಯವನ್ನು ಎತ್ತರಕ್ಕೆ ಹೆಚ್ಚಿಸಿದರು. ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿ ಬರೆಯುವ ಮೂಲಕ ಅಂತರಾಷ್ಟ್ರೀಯ ಮಟ್ಟದಲ್ಲಿ ಬೆಳೆದರು. ಕಾವ್ಯ, ನಾಟಕ, ಕಾದಂಬರಿ, ಕಾವ್ಯಮೀಮಾಂಸೆ ಸೇರಿದಂತೆ ಅವರ ಸಾಹಿತ್ಯ ವಿಸ್ತಾರ ಎಂಥವರಿಗೂ ಬೆರಗು ಹುಟ್ಟಿಸುತ್ತದೆ ಎಂದರು.

ಗೋಕಾಕರ 'ಸಮರಸವೇ ಜೀವನ'ಕೃತಿಯ ಇಂಗ್ಲಿಷ್ ಅನುವಾದ ಕೃತಿ ದಿ ಅಗೋನಿ ಅಂಡ್‌ಗ್ಲೋರಿ ಮತ್ತು ಗೋಕಾಕರ "ಸಮುದ್ರ ಗೀತೆ"ಗಳ ಸಿ.ಡಿ.ಯನ್ನು ಬಿಡುಗಡೆ ಮಾಡಿ ಮಾತನಾಡಿದ ಯು. ಆರ್. ಅನಂತಮೂರ್ತಿಯವರು "ಗೋಕಾಕ್ ಅವರದು ರಾಜರಾಮ್ ಮೋಹನ್‌ರಾಯ್ ಅರವಿಂದರ ಪಥದಲ್ಲಿ ಸಾಗಿದ ಮನಸ್ಸು ವೈದಿಕಬಿಟ್ಟು, ಲೌಕಿಕವನ್ನು ನಂತರ ಆಧ್ಯಾತ್ಮವನ್ನು ಆವಾಹಿಸಿಕೊಂಡರು ಎಂದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಮನುಬಳಿಗಾರ್ ಮಾತನಾಡಿ ಗೋಕಾಕ್ ಅವರ ಸಮಗ್ರ ಕೃತಿಗಳನ್ನು ಹೊರತರುವುದು ಮತ್ತು ಅವರ ಜನ್ಮಸ್ಥಳ ಸ್ಮಾರಕವಾಗಿ ಮಾಡುವ ಉದ್ದೇಶ ಇದೆ ಎಂದರು.

## ಮುಳ್ಳೂರು ನಾಗರಾಜರ ಕುರಿತ ವಿಚಾರ ಸಂಕಿರಣ

ಕರ್ನಾಟಕ ಸಾಹಿತ್ಯ ಅಕಾಡೆಮಿ ಮತ್ತು ಡಾ॥ ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣ ಕೇಂದ್ರ ಮೈಸೂರು ಇವರ ಸಂಯುಕ್ತಾಶ್ರಯದಲ್ಲಿ ದಲಿತಕವಿ ಮುಳ್ಳೂರು ನಾಗರಾಜರ ಸಾಹಿತ್ಯ ಮತ್ತು ಹೋರಾಟ ಎಂದು ವಿಷಯವಾಗಿ ಒಂದು ದಿನದ ವಿಚಾರ ಸಂಕಿರಣವನ್ನು ಮಾನಸಗಂಗೋತ್ರಿ ಮೈಸೂರು ಇಲ್ಲಿ ದಿನಾಂಕ ೪ ಜುಲೈ ೨೦೦೮ರಂದು ಏರ್ಪಡಿಸಲಾಗಿತ್ತು. ಅತಿಥಿ ಗಳಾಗಿ ಡಾ॥ ಸಿದ್ಧಲಿಂಗಯ್ಯ, ಕಾಳೇಗೌಡ ನಾಗವಾರ ಮುಂತಾದವರು ಭಾಗವಹಿಸಿದ್ದರು.

ಉದ್ಘಾಟನೆ ಮಾಡಿ ಮಾತನಾಡಿದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಸಿದ್ಧಲಿಂಗಯ್ಯ "ಕನ್ನಡ ಸಾಹಿತ್ಯ ಲೋಕವನ್ನು ಬೆಳೆಸುವಲ್ಲಿ ಮುಳ್ಳೂರು ನಾಗರಾಜ ಅವರ ಪಾತ್ರವೂ ಪ್ರಮುಖವಾದದ್ದು. ದಲಿತ ಸಾಹಿತ್ಯದ ಮೂಲಕ ಕನ್ನಡ ಸಾಹಿತ್ಯದಲ್ಲಿ ಹೊಸ ಸಾಧ್ಯತೆಗಳನ್ನು ಅವರು ತೋರಿಸಿಕೊಟ್ಟಿದ್ದಾರೆ ಎಂದರು, ಬಡತನ ಒಂದು ಶಕ್ತಿ, ಪ್ರತಿಭಟನೆ ಹೋರಾಟ ಪ್ರಮುಖವಾದ ಅಸ್ತ್ರ ಆದರೆ ನಮ್ಮ ಇಂದಿನ ದಲಿತ ಹೋರಾಟಗಾರರಿಗೆ ಪ್ರತಿಭಟನೆ ಮನೋಭಾವವೇ ಹೊರಟು ಹೋಗಿದೆ, ದಲಿತ ಹೋರಾಟಗಾರರಿಗೆ ಯಾವುದೇ ರೀತಿಯ ಬೆಲೆ ಉಳಿದಿಲ್ಲ ಎಂದು ವಿಷಾದಿಸಿದರು. ಮುಖ್ಯ ಅತಿಥಿಯಾಗಿದ್ದ ಸಾಹಿತಿ ಪ್ರೊ॥ ಕಾಳೇಗೌಡ ನಾಗವಾರ ಮಾತನಾಡಿ ದುಡ್ಡು ಇರುವವರು ಏನೆಲ್ಲಾ ಮಾಡಬಹುದು ಎನ್ನುವುದಕ್ಕೆ ಸಾಹಿತ್ಯಕ್ಷೇತ್ರವೂ ಉದಾಹರಣೆ ಯಾಗಿದೆ. ದುಡ್ಡು ಇರುವವರಿಗೆ ಮಣೆ ಹಾಕುವ ಪ್ರವೃತ್ತಿಯನ್ನು ನಮ್ಮವರು ಬಿಡಬೇಕು ಎಂದು ಹೇಳಿದರು.

ಅನೇಕ ಪ್ರಮುಖ ಸಾಹಿತಿಗಳು ಎರಡು ಗೋಷ್ಠಿಗಳಲ್ಲಿ ತಮ್ಮ ಪ್ರಬಂಧಗಳನ್ನು ಮಂಡಿಸಿದರು.

n

# ಗೌರವ ಪ್ರಶಸ್ತಿ ೨೦೦೮



ಪ್ರೊ॥ ಎಚ್.ಎಂ. ಬೀಳಗಿ ಅವರಿಗೆ ಗೌರವ ಪ್ರಶಸ್ತಿ ಪ್ರದಾನ

**ಪ್ರಕಟಿತ ಕೃತಿಗಳು**

| | |
|---|---|
| **ಸಂಪಾದನೆ** | ರಿವಾಯತಗಳು, ಅಮುಗೆ ರಾಯಮ್ಮನ ವಚನಗಳು, ಶಾಂತಕಿರಣ, ಗಿರಿಜಾ ಕಲ್ಯಾಣ |
| **ಶಾಸ್ತ್ರ ಕೃತಿ** | ಪ್ರತಿಫಲನ (ಶಬ್ದಮಣಿ ದರ್ಪಣದ ಸಾಧಾರ ನಿರೂಪಣೆ) |
| **ಸ್ವತಂತ್ರ ಕೃತಿಗಳು** | ಶಿವಶರಣೆಯರು, ನೀಲಾಂಬಿಕಾ, ವಚನಕಾರ್ತಿಯರು – ಭಾಗ-೧, ಭಾಗ-೨ ಜಾನಪದ ಸೃಷ್ಟಿ-ದೃಷ್ಟಿ, ರಿವಾಯತಗಳ ಅನುಸಂಧಾನ |
| **ಸಂಪಾದನೆ (ಇತರರೊಡನೆ)** | ಅಕ್ಕ ಕೇಳವ್ವ, ಸಮನ್ವಯ |





ವಿಷ್ಣು ನಾಯ್ಕ ಅವರಿಗೆ
ಗೌರವ ಪ್ರಶಸ್ತಿ ಪ್ರದಾನ

**ಪ್ರಕಟಿತ ಕೃತಿಗಳು**

| | |
|---|---|
| **ಕವನ ಸಂಕಲನಗಳು** | ನನ್ನ ಅಂಬಾರಕೊಡ್ಲ, ಹೊಸ ಭತ್ತ, ವಾಸ್ತವ, ಕಳಕೊಂಡ ಕವಿತೆ, ನೋವು ಪ್ರೀತಿಯ ಪ್ರಶ್ನೆ, ಮುಚ್ಚಿದ ಬಾಗಿಲು ಮತ್ತು ಮರಿಗುಬ್ಬಿ, ಬೆಳಕಿನ ಕರೆ, ನೂರೆಂಟು ಕಿಟಕಿಗಳು, ಸಂಜೆಯ ಸೂರ್ಯ |
| **ನಾಟಕಗಳು** | ಸರಾಯಿ ಸೂರಪ್ಪ, ಬೋಳುಗುಡ್ಡ, ಬಿನ್ನಹಕ್ಕೆ ಬಾಯಿಲ್ಲ, ಒಂದುಹನಿ ರಕ್ತ, ಅಯ್ನೋರ ಪೂಜೆ, ಸಾವಿನ ಹಾದಿ, ಯುದ್ಧ, ಪ್ರೀತಿ ಜಗತ್ತಿನ ದೊರೆ |
| **ವಿಚಾರ ವಿಮರ್ಶೆ** | ಮಾನವಿಕ-ಅಂಕಣ ಬರಹ : ಮರ್ಯಾದೆ, ಪ್ರಮಾಣ ವರ್ತಮಾನದ ಕಣ್ಣು, ಕಾಲೋಚಿತ, ದುಡಿಯುವ ಕೈಗಳ ಹೋರಾಟದ ಕಥೆ, ಪ್ರವೇಶ |
| **ಸಣ್ಣಕತೆ** | ಕಣ್ಣೀರ ಕಥೆಗಳು |
| **ಕಾದಂಬರಿ** | ಬೆರೆ |





**ಪ್ರೊ॥ ಮಲ್ಲಿಕಾರ್ಜುನ ಹಿರೇಮಠ ಅವರಿಗೆ**
**ಗೌರವ ಪ್ರಶಸ್ತಿ ಪ್ರದಾನ**



**ಪ್ರಕಟಿತ ಕೃತಿಗಳು**

**ಕವನ ಸಂಕಲನ** ಆಕ್ವೇರಿಯಂ ಮೀನು
**ಕಥಾ ಸಂಕಲನ** ಅಮೀನಪುರದ ಸಂತೆ
**ಕಾದಂಬರಿ** ಹವನ
**ಪ್ರವಾಸ ಕಥನ** ಜ್ಞಾನೇಶ್ವರನ ನಾಡಿನಲ್ಲಿ
**ವಿಮರ್ಶೆ** ಅಂತರ್ಗತ
ಸಂಪಾದನೆ (ಇತರರೊಡನೆ) ತಿರುಳ್ಗನ್ನಡ, ಬಾಗಿಲು, ಸತ್ಯಾಶ್ರಯ



**ಲಕ್ಷ್ಮಣ್ ಅವರಿಗೆ**
**ಗೌರವ ಪ್ರಶಸ್ತಿ ಪ್ರದಾನ**



**ಪ್ರಕಟಿತ ಕೃತಿಗಳು**

**ಕವನ ಸಂಕಲನ** ಮೂಕವೇದನೆ
**ಕಾದಂಬರಿ** ಬದುಕು, ಜಡಿಮಳೆ
**ಸಣ್ಣಕಥೆ** ಕುಯಿಲು
**ಆತ್ಮಕಥೆ** ಸಂಬೋಳಿ
**ಸಂಪಾದನೆ** ಕಾವ್ಯ ಖಡ್ಗ, ವಿಮೋಚನಾವಾಣಿ ಸೂಕ್ತಿ, ಬೆಳಕಿನೆಡೆಗೆ
**ಪ್ರವಾಸ ಕಥನ** ಬೆಲೆಬಾಳುವ ತಂಗಿಯರು (ದಕ್ಷಿಣ ಕೊರಿಯಾ ಪ್ರವಾಸ)




# ನಾಲ್ವರಿಗೆ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿತರಣೆ



**ಕ**ರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ಬಾಗಲಕೋಟೆ ಜಿಲ್ಲೆ ಜಮಖಂಡಿಯ ಬಸವ ಭವನದಲ್ಲಿ ೨೮-೭-೦೯ರಂದು ಏರ್ಪಡಿಸಲಾಗಿದ್ದ ಅದ್ದೂರಿ ಸಮಾರಂಭದಲ್ಲಿ ವಿಷ್ಣು ನಾಯ್ಕ, ಮಲ್ಲಿಕಾರ್ಜುನ ಹಿರೇಮಠ ಸೇರಿದಂತೆ ನಾಲ್ವರು ಸಾಹಿತಿಗಳಿಗೆ ೨೦೦೮ನೇ ಸಾಲಿನ ಗೌರವ ಪ್ರಶಸ್ತಿ ಹಾಗೂ ೧೨ ಜನರಿಗೆ ೨೦೦೭ನೇ ಸಾಲಿನ ಪುಸ್ತಕ ಬಹುಮಾನ ಪ್ರದಾನ ಮಾಡಲಾಯಿತು.

ಗೌರವ ಪ್ರಶಸ್ತಿ ಮತ್ತು ಬಹುಮಾನ ವಿತರಿಸಿ ಮಾತನಾಡಿದ ಸಾಹಿತಿ ಬರಗೂರು ರಾಮಚಂದ್ರಪ್ಪ, ಸರ್ಕಾರವು ನಿಯಮಾವಳಿ ರೂಪಿಸುವ ಮೂಲಕ ಅಕಾಡೆಮಿಗಳ ಸಾಂಸ್ಕೃತಿಕ ಸ್ವಾಯತ್ತತೆ ಕಸಿದುಕೊಳ್ಳುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಅಕಾಡೆಮಿಗಳ ಮೇಲೆ ಸರ್ಕಾರದ ಆರ್ಥಿಕ ನಿಯಂತ್ರಣ ಒಪ್ಪಿಕೊಳ್ಳಬಹುದು. ಆದರೆ ಸರ್ಕಾರ ೨೦೦೫ರಲ್ಲಿ ತಿದ್ದುಪಡಿಯ ಮೂಲಕ ಅಕಾಡೆಮಿಗಳ ಸ್ವಾಯತ್ತತೆಗೆ ಭಂಗ ತಂದಿದೆ. ಅಕಾಡೆಮಿಯ ಸ್ವಾಯತ್ತತೆ ರಕ್ಷಣೆಗೆ ಸಾಹಿತ್ಯ ವಲಯ ಧ್ವನಿ ಎತ್ತಬೇಕಿದೆ ಎಂದು ಬರಗೂರು ಹೇಳಿದರು.

**ನ್ಯಾಯದ ಪ್ರಶ್ನೆ:** ಸರ್ಕಾರ ಅಥವಾ ಅಕಾಡೆಮಿಗಳು ನೀಡುವ ಪ್ರಶಸ್ತಿಗಳಲ್ಲಿ ಸಾಮಾಜಿಕ ಹಾಗೂ ಪ್ರಾದೇಶಿಕ ನ್ಯಾಯ ಹುಡುಕುವ ನಾವು ಖಾಸಗಿ ಸಂಸ್ಥೆಗಳ ಪ್ರಶಸ್ತಿ ಬಗ್ಗೆ ಚಕಾರ ಎತ್ತುತ್ತಿಲ್ಲ ಎಂದು ಬರಗೂರು ಅಚ್ಚರಿ ವ್ಯಕ್ತಪಡಿಸಿದರು.

ಸಾಮಾಜಿಕ ಹಾಗೂ ಪ್ರಾದೇಶಿಕ ನ್ಯಾಯ ಸಮಾಜದ ಎಲ್ಲ ನೆಲೆಗಳಲ್ಲೂ ಅಗತ್ಯವಿದ್ದು, ಖಾಸಗಿ ಸಂಸ್ಥೆ ನೀಡುವ ಪ್ರಶಸ್ತಿಗಳಲ್ಲಿ ಅದನ್ನು ನಾವು ಯಾಕೆ ಕೇಳಬಾರದು ಎಂದು ಪ್ರಶ್ನಿಸಿದರು.

**ಪ್ರಶಸ್ತಿ ಪ್ರದಾನ:** ೨೦೦೮ನೇ ಸಾಲಿನ ಗೌರವ ಪ್ರಶಸ್ತಿಗಳನ್ನು ಪ್ರೊ. ಎಚ್.ಎಂ. ಬೀಳಗಿ, ವಿಷ್ಣು ನಾಯ್ಕ, ಪ್ರೊ. ಮಲ್ಲಿಕಾರ್ಜುನ ಹಿರೇಮಠ ಹಾಗೂ ಲಕ್ಷ್ಮಣ ಅವರಿಗೆ ನೀಡಲಾಯಿತು. ಪ್ರೊ. ಅ.ರಾ. ಮಿತ್ರ ಸಮಾರಂಭಕ್ಕೆ ಬಂದಿರಲಿಲ್ಲ.

ಅದೇ ರೀತಿ ೨೦೦೭ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಆಯ್ಕೆಗೊಂಡು ಒಟ್ಟು ೧೮ ಲೇಖಕರ ಪೈಕಿ ೧೨ ಜನರು ಪ್ರಶಸ್ತಿ ಸ್ವೀಕರಿಸಿದರು. ಪ್ರಶಸ್ತಿ ಪಡೆದವರ ಹೆಸರು ಹಾಗೂ ಕೃತಿಗಳ ವಿವರ ಈ ಕೆಳಗಿನಂತಿದೆ: ಬಸವರಾಜ ವಕ್ಕುಂದ (ಒಡೆಯಲಾರದ ಪ್ರತಿಮೆ), ನೇಮಿಚಂದ್ರ (ಯಾದ್ ವಶೇಮ್), ಮಹ್ಮದ್ ಕುಳಾಯಿ (ನನ್ನ ಇನ್ನಷ್ಟು ಕಥೆಗಳು), ಪ್ರೊ. ಎಸ್. ಜಿ. ಸಿದ್ಧರಾಮಯ್ಯ (ದಾಳ), ಪ್ರೊ. ಎಚ್.ಕೇಶವಮೂರ್ತಿ (ದೇವರುಗಳ ಟೈಮೇ ಸರಿ ಇಲ್ಲ!), ಸಂಗಮೇಶ ಕೋಟಿ (ದುಬೈ ಎಂಬ ಮಾಯಾನಗರಿ), ನಾ.ಸು. ಭರತನ ಹಳ್ಳಿ (ರೋಬೋಟೋ ಮತ್ತು ಚಿಹ್ನೆಗಳು), ಡಾ|| ಹಾಲತಿ ಸೋಮಶೇಖರ (ಮಹಿಳಾ ಚಳವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ), ಪ್ರೊ. ಚಂದ್ರಕಾಂತ ಪೋಕಳೆ (ನೆಲವೆದ್ದು ಬಡಿಯಿತು), ಬಸವರಾಜ ಹೂಗಾರ (ತತ್ರಾಣಿ) ಹಾಗೂ ಪಿ.ಸಿ. ಅಂತೋಣಿ ಸ್ವಾಮಿ (ಓರಿಜಿನ್ ಆಫ್ ಕ್ರಿಶ್ಚಿಯಾನಿಟಿ), ಗಣೇಶ ಅಮೀನಗಡ (ಬಣ್ಣದ ಬದುಕಿನ ಚಿನ್ನದ ದಿನಗಳು). ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ ಅಧ್ಯಕ್ಷತೆ ವಹಿಸಿದ್ದರು.

ಸಾಹಿತ್ಯ ಅಕಾಡೆಮಿ ರಿಜಿಸ್ಟ್ರಾರ್ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಸ್ವಾಗತಿಸಿದರು. ಸದಸ್ಯ ಡಾ|| ಬಾಳಾ ಸಾಹೇಬ್ ಲೋಕಾಪುರ ಪ್ರಾಸ್ತಾವಿಕವಾಗಿ ಮಾತನಾಡಿದರು. ಶಾರದಾ ಮುಳ್ಳೂರ ಮತ್ತಿತರರಿದ್ದರು.

*ಕೃಪೆ: ಪ್ರಜಾವಾಣಿ, ೨೯-೭-೦೯*



# ಸಾಂಸ್ಕೃತಿಕ ಕ್ಷೇತ್ರದಲ್ಲಿ ಹಸ್ತಕ್ಷೇಪ ಬೇಡ

ಅಕಾಡೆಮಿ ನಿಯಮಗಳು ಸಾಂಸ್ಕೃತಿಕ ಸ್ವಾಯತ್ತತೆಗೆ ಭಂಗ ತರುವಂತಿದ್ದು, ಅವುಗಳಿಗೆ ಸೂಕ್ತ ತಿದ್ದುಪಡಿ ತರಬೇಕಾದ ಅಗತ್ಯವಿದೆ ಎಂದು ನಾಡಿನ ಹಿರಿಯ ಸಾಹಿತಿ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟರು.

ರಾಜ್ಯ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ ಪ್ರದಾನ ಹಾಗೂ ಪುಸ್ತಕ ಬಹುಮಾನ ವಿತರಣೆ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಸಾಂಸ್ಕೃತಿಕ ಸ್ವಾಯತ್ತ ಸಂಸ್ಥೆಗಳಿಗೆ ಸಂಪೂರ್ಣ ಸ್ವಾತಂತ್ರ್ಯ ಇರಬೇಕು. ಅಕಾಡೆಮಿಯ ಸದ್ಯದ ನಿಯಮಾವಳಿಗಳು ಸಾಂಸ್ಕೃತಿಕ ಸ್ವಾಯತ್ತತೆಯನ್ನು ಕಸಿದುಕೊಂಡಿವೆ. ಸ್ವಾಯತ್ತ ಸಂಸ್ಥೆಗಳಲ್ಲಿನ ಹಸ್ತಕ್ಷೇಪ ಅವುಗಳಿಗೆ ಅಪಮಾನ ಮಾಡಿದಂತೆ. ಅಕಾಡೆಮಿಗಳ ಅಧ್ಯಕ್ಷರಾಗುವವರು ಪೂರ್ಣಾವಧಿ ಕೆಲಸದಲ್ಲಿರಬಾರದು ಎನ್ನುವುದಾಗಲಿ, ಸರಕಾರ ಅಕಾಡೆಮಿಗಳಿಗೆ ಸೂಚನೆ ನೀಡಬಹುದು ಎನ್ನುವ ನಿಯಮಗಳು ಅಪಾಯಕಾರಿ ಎಂದು ಬರಗೂರು ಹೇಳಿದರು.

ನಿಯಮಗಳಿಗೆ ಸೂಕ್ತ ತಿದ್ದುಪಡಿ ತರಬೇಕು. ನಿಯಮಾವಳಿಗಳಿಗೆ ತಿದ್ದುಪಡಿ ತರುವ ಜತೆಗೆ ಸಾಂಸ್ಕೃತಿಕ ಕ್ಷೇತ್ರದಲ್ಲಿ ಸರಕಾರದ ಹಸ್ತಕ್ಷೇಪ ನಿಲ್ಲಬೇಕು. ಸಂಪನ್ಮೂಲ ವಿಷಯದಲ್ಲಿ ಸರಕಾರ ಸೂಕ್ತ ನಿರ್ಧಾರ ಕೈಗೊಳ್ಳುವಲ್ಲಿ ಯಾವುದೇ ಪ್ರತಿರೋಧವಿಲ್ಲ ಎಂದು ಸ್ಪಷ್ಟಪಡಿಸಿದರು.

ಸರಕಾರಿ ಅಂಗ ಸಂಸ್ಥೆಗಳು ನೀಡುವ ಪ್ರಶಸ್ತಿಗಳ ವಿಷಯದಲ್ಲಿ ಪ್ರಾದೇಶಿಕ ನ್ಯಾಯ, ಸಾಮಾಜಿಕ ನ್ಯಾಯ ಪ್ರಶ್ನಿಸುವವರು ಖಾಸಗಿ ಸಂಸ್ಥೆಗಳು ಮನಬಂದಂತೆ ಪ್ರಶಸ್ತಿಗಳನ್ನು ವಿತರಣೆ ಮಾಡುವುದನ್ನು ಪ್ರಶ್ನಿಸುವುದಿಲ್ಲ. ಸರಕಾರಿ ಸಂಸ್ಥೆಗಳಿಗೆ ಒಂದು ನೀತಿ, ಖಾಸಗಿ ಸಂಸ್ಥೆಗಳಿಗೆ ಒಂದು ನೀತಿ ಬೇಡ, ಎಲ್ಲ ಕಡೆಗಳಲ್ಲೂ ಸಾಮಾಜಿಕ ನ್ಯಾಯ ಅನ್ವಯವಾಗಲಿ ಎಂದರು.

ಅಕಾಡೆಮಿಗಳಲ್ಲಿ ಕೆಲಸ ಮಾಡುತ್ತಿರುವ ನೌಕರರ ಪರಿಸ್ಥಿತಿ ಇಂದಿಗೂ ಶೋಚನಿಯವಾಗಿದೆ. ಅವರಿಗೆ ಜೀವನದ ಭದ್ರತೆಯನ್ನು ಒದಗಿಸುವ ಕಡೆಗೂ ಸರಕಾರ ಗಮನ ಹರಿಸಬೇಕು ಎಂದು ಸೂಚ್ಯವಾಗಿ ಹೇಳಿದರು.

ಕನ್ನಡ ಸಾಹಿತ್ಯ ಪರಂಪರೆಯುದ್ದಕ್ಕೂ ಪ್ರತಿ ನಾಯಕನ ಕೆಲಸವನ್ನು ಈ ನೆಲದ ಸಾಹಿತಿಗಳು ಮಾಡುತ್ತಲೇ ಬಂದಿದ್ದಾರೆ. ಪಂಪ, ರನ್ನ, ಜನ್ನನಂಥ ಕವಿಗಳು, ೧೨ನೇ ಶತಮಾನದಲ್ಲಿ ವಚನಕಾರರು ರಾಜಪ್ರಭುತ್ವದಲ್ಲಿದ್ದು ಅದನ್ನು ಮೀರಿ ಪ್ರತಿನಾಯಕನ ಸ್ಥಾನದಲ್ಲಿ ನಿಂತು ಸಾಹಿತ್ಯ ರಚನೆ ಮಾಡಿದ್ದಾರೆ. ಅಂತಹ ಪರಂಪರೆ ಮುಂದುವರಿಯಬೇಕು.

ಪ್ರಸಕ್ತ ಸನ್ನಿವೇಶದಲ್ಲಿ ಯುದ್ಧೋದ್ಯಮ ಬೃಹತ್ ಉದ್ಯಮವಾಗಿ ಬೆಳೆದು ನಿಂತಿದೆ. ಕೆಲವರಿಗೆ ಶಸ್ತ್ರಾಸ್ತ್ರಗಳನ್ನು ಮಾರಾಟ ಮಾಡುವುದೇ ಕಾಯಕವಾಗಿದ್ದು, ಭಾರತ ಮತ್ತು ಪಾಕಿಸ್ತಾನದಂತಹ ರಾಷ್ಟ್ರಗಳು ಅವುಗಳನ್ನು ಖರೀದಿಸುವುದೇ ಕೆಲಸವಾಗಿದೆ. ಜತೆಗೆ ಜಗತ್ತಿನಲ್ಲಿ ಇಂದು ಧಾರ್ಮಿಕತೆ ಮರೆತ ಧರ್ಮ ವಿಜೃಂಭಿಸುತ್ತಿದೆ. ಧರ್ಮವೂ ವ್ಯಾಪಾರವಾಗಿಬಿಟ್ಟಿದೆ. ಹಾಗಾಗಿ ಮೂಲಭೂತವಾದ ಎಲ್ಲೆಲ್ಲು ತಲೆ ಎತ್ತುತ್ತಿರುವುದು ಅಪಾಯಕಾರಿ ಬೆಳವಣಿಗೆ ಎಂದು ಹೇಳಿದರು.

ಆರ್ಥಿಕ ನಾಯಕತ್ವದ ಮುಂದೆ ರಾಜಕೀಯ ನಾಯಕತ್ವ ಮೊಣಕಾಲೂರಿ ಕುಳಿತುಕೊಂಡಿದೆ. ಬಂಡವಾಳಶಾಹಿಗಳು ಎಲ್ಲ ಕ್ಷೇತ್ರಗಳಲ್ಲಿ ಪ್ರವೇಶಿಸುತ್ತಿರುವುದು ಅಪಾಯಕಾರಿ ಬೆಳವಣಿಗೆ. ವಿಶ್ವ ಬಂಡವಾಳಶಾಹಿಗಳು ದೇಶಕ್ಕೆ ಬರುವುದಾದಲ್ಲಿ ಅವರು ಭಕ್ತರಾಗಿ ಬರಬೇಕು. ಅಂದಾಗ ಅವರು ಎಲ್ಲವನ್ನು ಹುಡುಕುತ್ತಾರೆ. ಅದೇ ಭಗವಂತನಾಗಿ ಬಂದಲ್ಲಿ ಸವಾರಿ ಕೆಲಸ ನಡೆಯುತ್ತದೆ. ಬಂಡವಾಳಶಾಹಿಗಳ ಪ್ರವೇಶ ಶೈಕ್ಷಣಿಕ ಕ್ಷೇತ್ರ ಸೇರಿದಂತೆ ಎಲ್ಲ ಕ್ಷೇತ್ರಗಳ ಮೇಲೂ ದುಷ್ಪರಿಣಾಮ ಉಂಟುಮಾಡುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟರು.

ಅಕಾಡೆಮಿ ಸದಸ್ಯರಾದ ಬಾಳಾಸಾಹೇಬ ಲೋಕಾಪೂರ ಪ್ರಾಸ್ತಾವಿಕವಾಗಿ ಮಾತನಾಡಿದರು. ಅಕಾಡೆಮಿ ರಿಜಿಸ್ಟ್ರಾರ್ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಸ್ವಾಗತಿಸಿದರು.

*ಸೌಜನ್ಯ: ವಿಜಯ ಕರ್ನಾಟಕ*

# ಹಾಸ್ಯ ಸಾಹಿತ್ಯಕ್ಕೆ ಅಭಿರುಚಿ ತುಂಬಿದ ಅ.ರಾ. ಮಿತ್ರ

**ಸಾ**ಹಿತಿ ಅ.ರಾ.ಮಿತ್ರ ಹಾಸ್ಯ ಸಾಹಿತ್ಯವನ್ನು ಕೇವಲ ಹರಟೆ, ಕಾಲಹರಣಕ್ಕಾಗಿ ಮಾತ್ರ ಬರೆಯದೆ ಜೀವನದ ಭಾಷ್ಯ ತಿಳಿಸಲು ಬಳಸಿದ್ದು ಶ್ರೇಷ್ಠವೆನಿಸಿದೆ ಎಂದು ಡಾ॥ ಬಿ.ವಿ. ವಸಂತಕುಮಾರ್ ಬಣ್ಣಿಸಿದರು.

ರಾಜ್ಯ ಸಾಹಿತ್ಯ ಅಕಾಡೆಮಿಯ 'ಗೌರವ ಪ್ರಶಸ್ತಿ – ೨೦೦೮' ಪ್ರದಾನ ಹಾಗೂ ಪುಸ್ತಕ ಬಹುಮಾನ – ೨೦೦೭ ವಿತರಣಾ ಸಮಾರಂಭದ ಅಂಗವಾಗಿ ಮಧ್ಯಾಹ್ನ ಜರುಗಿದ ಗೌರವ ಪ್ರಶಸ್ತಿ ಪುರಸ್ಕೃತರ ಸಾಹಿತ್ಯಿಕ ಸಾಧನೆ ಕುರಿತು ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಅ. ರಾ. ಮಿತ್ರರು ಶಾಸ್ತ್ರವನ್ನು ಸೃಜನಶೀಲ ಸಾಹಿತ್ಯವಾಗಿಸಿದವರು. ಹಾಸ್ಯ ಸಾಹಿತ್ಯಕ್ಕೆ ಅಭಿರುಚಿ ತುಂಬಿದವರು. ಬದುಕಿನ ಸಮಸ್ಯೆಗಳಿಗೆ ಪರಿಹಾರ ಕಂಡು ಮನಸ್ಸು ಅರಳಿಸುವ ಕಾರ್ಯ ಅವರ ಸಾಹಿತ್ಯದಿಂದ ರೂಪುಗೊಂಡಿದೆ ಎಂದರು.

ಪ್ರೊ. ಎಂ.ಎಸ್. ಬೀಳಗಿ ಅವರ ಸಾಹಿತ್ಯಿಕ ಸಾಧನೆ ಕುರಿತು ಮಾತನಾಡಿದ ಡಾ॥ ಶಾಂತಾ ಇಮ್ರಾಪುರ ಜಾನಪದ ಮತ್ತು ರಿವಾಯತ್ ಪದಗಳ ರಚನೆ ಮೂಲಕ ಮನೆಮಾತಾಗಿಸಿದ ಮಹಿಳಾ ಸಾಹಿತಿ ಅವರಾಗಿದ್ದಾರೆ. ಸ್ವಾತಂತ್ರ್ಯ ಪೂರ್ವದಲ್ಲಿ ಮಹಿಳೆಯರಿಗೆ ಅಕ್ಷರ ಕ್ರಾಂತಿ ಗೌಣವೆನಿಸಿದರೂ ಕೂಡ ಮುಸ್ಲಿಂ ಸಮಾಜದ ಮಹಿಳೆಯಾಗಿದ್ದುಕೊಂಡು ಸಾಹಿತ್ಯ ಕ್ಷೇತ್ರದಲ್ಲಿ ತಮ್ಮ ಛಾಪು ಒತ್ತಿದವರು ಎಂದು ಹೇಳಿದರು.

ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತ ಸಾಹಿತ್ಯ ಕೃಷಿ ಮಾಡಿದವರು ಬೀಳಗಿ ಎಂದು ತಿಳಿಸಿದರು.

ಪ್ರೊ. ಮಲ್ಲಿಕಾರ್ಜುನ ಹಿರೇಮಠ ಅವರ ಸಾಹಿತ್ಯಿಕ ಸಾಧನೆ ಕುರಿತು ಡಾ॥ ವಿಜಯಕುಮಾರ ಕಟಗಿಹಳ್ಳಿಮಠ ಮಾತನಾಡಿ ಬಹುತೇಕ ಸಾಹಿತಿಗಳು ಕವಿತೆ ಬರೆಯುವ ಮೂಲಕ ಸಾಹಿತ್ಯ ಕ್ಷೇತ್ರ ಪ್ರವೇಶಿಸುವರು. ಶೋಷಿತ ವರ್ಗದ ಹಾಗೂ ಅಲೆಮಾರಿ ಜನಾಂಗದ ಬಗ್ಗೆ ಸಾಹಿತ್ಯ ರಚಿಸಿದವರಲ್ಲಿ ಹಿರೇಮಠರು ಕೂಡ ಒಬ್ಬರು ಎಂದರು.

ಲಕ್ಷ್ಮಣ್ ಅವರ ಸಾಹಿತ್ಯಿಕ ಸಾಧನೆ ಕುರಿತು ಡಾ॥ ವಡ್ಡಗೆರೆ ನಾಗರಾಜಯ್ಯ ಮಾತನಾಡಿ ನಿಜ ಜೀವನದ ಸಂಗತಿಗಳನ್ನು ಲಕ್ಷ್ಮಣ್ ಸಾಹಿತ್ಯದಲ್ಲಿ ಅಳವಡಿಸಿದರು. ದಲಿತ ಹೋರಾಟಗಾರರಾಗಿ ಬದುಕು ಮತ್ತು ಬರವಣಿಗೆಯಲ್ಲಿ ವ್ಯತ್ಯಾಸ ಕಾಣದವರು ಎಂದು ಬಣ್ಣಿಸಿದರು.




**ಪ್ರಶಸ್ತಿ ಪುರಸ್ಕೃತರನ್ನು ಕುರಿತ ವಿಚಾರ ಸಂಕಿರಣದಲ್ಲಿ ಶಾಂತ ಇಮ್ರಾಪುರ ಮಾತನಾಡುತ್ತಿರುವುದು**

ಅಧ್ಯಕ್ಷತೆ ವಹಿಸಿದ್ದ ಹಿರಿಯ ಸಾಹಿತಿ ಅಂಬಾತನಯ ಮುದ್ರಾಡಿ, ಪ್ರಶಸ್ತಿ ಪುರಸ್ಕೃತ ವಿಷ್ಣು ನಾಯ್ಕ ಅವರ ಸಾಹಿತ್ಯಿಕ ಸಾಧನೆ ಕುರಿತು ಮಾತನಾಡಿ ಗೌರವ ಪ್ರಶಸ್ತಿ ಸಾಹಿತಿಗಳಿಗೆ ಇನ್ನಷ್ಟು ಪ್ರೇರಣೆಯಾಗಬಲ್ಲದು. ಸಾಹಿತ್ಯ ಕ್ಷೇತ್ರದ ಸಾರಸ್ವತ ಲೋಕಕ್ಕೆ ವಿಷ್ಣುನಾಯ್ಕ ಅವರ ಸೇವೆ ಅನನ್ಯ ಎಂದರು.

ಸಾಹಿತ್ಯ ಅಕಾಡೆಮಿ ಸದಸ್ಯ ಶಾರದಾ ಮುಳ್ಳೂರ ಸ್ವಾಗತಿಸಿದರು. ಪ್ರೊ. ವಿನಾಯಕ ಕುಲಕರ್ಣಿ ನಿರೂಪಿಸಿದರು.

ರೇಣುಕಾ ಮಾಲಾಪುರ ತಂಡದವರಿಂದ ಶ್ರೀಕೃಷ್ಣ ಪಾರಿಜಾತ ಹಾಡುಗಾರಿಕೆ ನಡೆಯಿತು.

ನಗರದ ಎ.ಜಿ. ದೇಸಾಯಿ ವೃತ್ತದಿಂದ ಬಸವ ಭವನದ ವರೆಗೆ ನಾನಾ ವಾದ್ಯಮೇಳದೊಂದಿಗೆ ಮೆರವಣಿಗೆ ನಡೆಯಿತು.

*ಸೌಜನ್ಯ: ವಿಜಯ ಕರ್ನಾಟಕ*

p

# ಸಾಂಸ್ಕೃತಿಕ ಸ್ವಾಯತ್ತತೆಗೆ ಧಕ್ಕೆ: ಬರಗೂರು

ಅಕಾಡೆಮಿಗಳಲ್ಲಿ ನಿಯಮಗಳ ಮೂಲಕ ಅತಿಕ್ರಮಣ ಮಾಡಿ ಸಾಂಸ್ಕೃತಿಕ ಸ್ವಾಯತ್ತತೆಗೆ ಭಂಗ ತರುವ ಪ್ರಯತ್ನ ನಡೆದಿದ್ದು, ಪ್ರತಿರೋಧದ ನೆಲೆಯ ಮೂಲಕ ಇದನ್ನು ತಡೆಯಬೇಕೆಂದು ಹಿರಿಯ ಸಾಂಸ್ಕೃತಿಕ ಚಿಂತಕ ಪ್ರೊ॥ ಬರಗೂರು ರಾಮಚಂದ್ರಪ್ಪ ಇಂದಿಲ್ಲಿ ಆಗ್ರಹಿಸಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಗೌರವ ಪ್ರಶಸ್ತಿ ಹಾಗೂ ಪುಸ್ತಕ ಬಹುಮಾನ ವಿತರಣೆಯ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಮಾತನಾಡಿದ ಅವರು ೨೦೦೫ರಲ್ಲಿ ರೂಪಿಸಿದ ನಿಯಮಗಳ ಮೂಲಕ ಅಕಾಡೆಮಿಗಳ ಅಧಿಕಾರವನ್ನು ಮೊಟಕುಗೊಳಿಸಿ ಸರಕಾರ ಹೇರಿರುವ ನಿಯಂತ್ರಣ ಅತಿಕ್ರಮಣವಾಗಿದ್ದು, ಇದರಿಂದ ಸಾಂಸ್ಕೃತಿಕ ಸ್ವಾಯತ್ತತೆಗೆ ಪೂರ್ತಿ ಪೆಟ್ಟು ಬಿದ್ದಂತಾಗಿದೆ ಎಂದು ಕಳವಳ ವ್ಯಕ್ತಪಡಿಸಿದರು.

ಸರಕಾರ ಸೂಚನೆಗಳನ್ನು ನೀಡುವ ಮೂಲಕ ಅವುಗಳನ್ನು ಪಾಲಿಸುವುದನ್ನು ಅಕಾಡೆಮಿಗಳಿಗೆ ಕಡ್ಡಾಯಗೊಳಿಸಿದೆ ಎಂದು ಹೇಳಿದ ಅವರು, ಸರಕಾರ ಒದಗಿಸುವ ಸಂಪನ್ಮೂಲ ಜನರಿಂದ ಬಂದ ಹಣವಾಗಿದ್ದು, ಆರ್ಥಿಕ ವಿಕೇಂದ್ರೀಕರಣಕ್ಕೆ ನಿಯಂತ್ರಣ ಹೇರಲಿ, ಆದರೆ ಕಾರ್ಯಕ್ರಮಗಳ ಮೇಲೆ ನಿಯಂತ್ರಣ ಹೇರಬಾರದೆಂದು ವಾದಿಸಿದ ಪ್ರೊ॥ ಬರಗೂರು, ಯಾವ ಪಕ್ಷ ಹಾಗೂ ಸರಕಾರವನ್ನು ತಾವು ಇದಕ್ಕಾಗಿ ದೂಷಿಸುತ್ತಿಲ್ಲ. ಆದರೆ ೨೦೦೫ರಲ್ಲಿ ರೂಪಿಸಲಾದ ಈ ನಿಯಮಾವಳಿಗಳನ್ನು ತಿದ್ದುಪಡಿ ಮಾಡುವ ಮೂಲಕ ವಾಪಸ್ಸು ಪಡೆದು ಅಕಾಡೆಮಿಗಳನ್ನು ಸ್ವಾಯತ್ತಗೊಳಿಸಬೇಕು. ಸಾಂಸ್ಕೃತಿಕ ಚಟುವಟಿಕೆಗಳ ಅವುಗಳ ಅಧಿಕಾರವನ್ನು ಸ್ವತಂತ್ರಗೊಳಿಸಬೇಕೆಂದು ಸಲಹೆ ಮಾಡಿದರು. ಅಕಾಡೆಮಿಯ ಸಿಬ್ಬಂದಿ ಕೂಲಿಗಾಗಿ ಕೆಲಸ ಮಾಡುವಂತಹ ಸ್ಥಿತಿ ನಿರ್ಮಾಣವಾಗಿದ್ದು, ಅವರ ಸೇವೆ ಕೂಡಾ ಖಾಯಂವಾಗದಿರುವುದು ಸಾಂಸ್ಕೃತಿಕ ಕಾಳಜಿಗೆ ಕೊಟ್ಟ ಪೆಟ್ಟಾಗಿದೆ ಎಂದು ಅವರು ದೂರಿದರು.

ಕನ್ನಡ ಸಾಹಿತ್ಯ ಕ್ಷೇತ್ರದ ಆಯಾಮವನ್ನು ಮೆಲುಕು ಹಾಕಿದ ಪ್ರೊ॥ ಬರಗೂರು ಕವಿ, ಸಾಹಿತಿ ಕಾಲದ ಪ್ರತಿನಾಯಕನಾಗಬೇಕು. ಕಾಲದೊಳಗೆ ಇದ್ದು ಕಾಲವನ್ನು ಮೀರುವ ಕಾಲದ ಜೊತೆ ಕಾಳಗ ಮಾಡುವ ಧಾರೆ ಎರೆಯಬೇಕೆಂದರು. ಅಭಿವೃದ್ಧಿ ಹಾಗೂ ಅಧ್ಯಯನದ ಹಸಿವು ಇದ್ದು ಹುಸಿ ಪರಂಪರೆ, ಹುಸಿ ಶ್ರೇಷ್ಠತೆ, ಹುಸಿ ಸಂಸ್ಕೃತಿಯನ್ನು ತಿರಸ್ಕರಿಸುವ ಬಹುಮುಖ ಸಂಸ್ಕೃತಿಯನ್ನು ಪೋಷಿಸುವ ಪ್ರವೃತ್ತಿ ಬೇಕೆಂದರು.

ಸರಕಾರ ಕೊಡಮಾಡುವ ಪ್ರಶಸ್ತಿಗಳಲ್ಲಿ ಸಾಮಾಜಿಕ ನ್ಯಾಯದ ಅಳತೆಗೋಲನ್ನು ನಿಗದಿಪಡಿಸುವಾಗ ಖಾಸಗಿ ಪ್ರಶಸ್ತಿಗಳಿಗೆ ಅದು ಏಕೆ ಇಲ್ಲ ಎಂದು ಅವರು ಪ್ರಶ್ನಿಸಿದರು. ಅಧಿಕಾರದ ಅಹಂಕಾರವನ್ನು ನೀರಸಗೊಳಿಸಿ ಪಂಪ... ಪ್ರತಿರೋಧದ ನೆಲೆಯನ್ನು ನಿರ್ಮಿಸಿದ್ದಾನೆ. ಅದು ನಮಗೆ ಆದರ್ಶವಾಗಬೇಕು. ಪ್ರಜಾಪ್ರಭುತ್ವದ ಕುರ್ಚಿಯಲ್ಲಿ ಕುಳಿತ ಮನುಷ್ಯ ಕುಬ್ಜನಾಗದೇ ಅದರ ಘನತೆಯನ್ನು ಹೆಚ್ಚಿಸುವ ಕೆಲಸ ಮಾಡಬೇಕೆಂದು ಸಲಹೆ ಮಾಡಿದರು.

ದಾಸ ಸಾಹಿತ್ಯ ರಾಜ, ದೇವರ ದಾಸನಾಗಿ ಕೆಲಸ ಮಾಡಿದ್ದರೆ ವಚನ ಸಾಹಿತ್ಯ ಜಡ ಸಂಪ್ರದಾಯಕ್ಕೆ ತಿಲಾಂಜಲಿ ನೀಡಿ ಪುರಾಣ, ಸಂಪ್ರದಾಯವನ್ನು ಪುನರ್ ಸಂಯೋಜಿಸುವ ಕೆಲಸ ಮಾಡಿದೆ ಎಂದು ಅವರು ವಿಶ್ಲೇಷಿಸಿದರು.

ಧರ್ಮ ಮತ್ತು ಯುದ್ಧಗಳು ಇಂದು ಉದ್ಯಮವಾಗಿವೆ ಎಂದು ಎಚ್ಚರಿಕೆ ಮಾತುಗಳನ್ನಾಡಿದ ಪ್ರೊ॥ ಬರಗೂರು ರಾಮಚಂದ್ರಪ್ಪ, ಶಾಂತಿಯ ವಾಹಕರಾಗಿ ಕೆಲಸ ಆಗಬೇಕಾದ ನೆಲೆಯಲ್ಲಿ ಶಸ್ತ್ರಗಳ ಮಾರಾಟಕ್ಕೆ ಯುದ್ಧವನ್ನು ಉದ್ಯಮವನ್ನಾಗಿಸಿದ ಧರ್ಮವನ್ನು ಅಸ್ತ್ರವನ್ನಾಗಿಸುವ ದುಷ್ಟಪರಂಪರೆಗೆ ತಿಲಾಂಜಲಿ ನೀಡಿ ಶ್ರೇಣೀಕೃತ ಸಮಾಜದಲ್ಲಿ ಪ್ರತಿಗಾಮಿಗಳು ಒಂದಾಗಿ ಪ್ರಗತಿವಾದಿಗಳು ಚದುರಿ ಹೋಗಿರುವಾಗ ಸಮಾಜದಲ್ಲಿ ತಲ್ಲಣ ಕಂಡುಬಂದಿದೆ. ಸಾಂಸ್ಕೃತಿಕ ಸ್ಥಿತ್ಯಂತರದ ಮೂಲಕ ಸಾಂಸ್ಕೃತಿಕ ನಾಯಕತ್ವವನ್ನು ದೊರಕಿಸುವ ಕೆಲಸ ಸಾಹಿತ್ಯದಿಂದಾಗಲಿ ಎಂದು ಅವರು ಹಾರೈಸಿದರು.

ಸಮಾರಂಭದಲ್ಲಿ ಗೌರವ ಪ್ರಶಸ್ತಿ ಪುರಸ್ಕೃತರಾದ ಪ್ರೊ. ಶ್ರೀಮತಿ ಎಚ್.ಎಂ. ಬೀಳಗಿ, ವಿಷ್ಣು ನಾಯ್ಕ, ಮಲ್ಲಿಕಾರ್ಜುನ ಹಿರೇಮಠ, ಲಕ್ಷ್ಮಣ ಅವರಿಗೆ ಗೌರವ ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು. ಪ್ರೊ॥ ಅ.ರಾ. ಮಿತ್ರ ಅವರು ಅಮೆರಿಕಾ ಪ್ರವಾಸದಲ್ಲಿರುವುದರಿಂದ ಸಮಾರಂಭದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ.

೨೦೦೭ನೇ ಸಾಲಿನ ಪುಸ್ತಕ ಬಹುಮಾನ ಪಡೆದ ಬಸವರಾಜ ವಕ್ಕುಂದ (ಒಡೆಯಲಾರದ ಪ್ರತಿಮೆ), ನೇಮಿಚಂದ್ರ (ಯಾದ್‌ವಶೇಮ್), ಮಹಮದ್ ಕುಳಾಯಿ (ನನ್ನ ಇನ್ನಷ್ಟು ಕತೆಗಳು), ಪ್ರೊ॥ ಎಸ್.ಜಿ. ಸಿದ್ಧರಾಮಯ್ಯ (ದಾಳ), ಪ್ರೊ॥ ಎಚ್.ಎಲ್. ಕೇಶವಮೂರ್ತಿ (ದೇವರುಗಳ ಟೈಮೇ ಸರಿ ಇಲ್ಲ!), ಸಂಗಮೇಶ ಕೋಟಿ (ದುಬೈ ಎಂಬ ಮಾಯಾನಗರಿ), ಗಣೇಶ ಅಮೀನಗಡ (ಬಣ್ಣದ ಬದುಕಿನ ಚಿನ್ನದ ದಿನಗಳು), ನಾ.ಸು. ಭರತನಹಳ್ಳಿ (ರೋಬೋಟೋ ಮತ್ತು ಚಿಹ್ನೆಗಳು), ನಾಗೇಶ ಹೆಗಡೆ (ಆಚಿನ ಲೋಕಕ್ಕೆ ಕಾಲಕೋಶ), ಡಾ॥ ಹಾಲತಿ ಸೋಮಶೇಖರ (ಮಹಿಳಾ ಚಳವಳಿ ಸಾಮಾಜಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆ), ಪ್ರೊ॥ ಚಂದ್ರಕಾಂತ ಪೋಕಳೆ (ನೆಲವೆದ್ದು ಬಡಿಯಿತು), ಬಸವರಾಜ ಹೂಗಾರ (ತತ್ರಾಣಿ) ಪಿ.ಸಿ. ಅಂತೋಣಿಸ್ವಾಮಿ ಅವರುಗಳಿಗೆ ಪ್ರಶಸ್ತಿ ವಿತರಿಸಲಾಯಿತು.

ಕನ್ನಡ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪ್ರೊ॥ ಎಂ.ಎಚ್. ಕೃಷ್ಣಯ್ಯ ಅವರು ಅಧ್ಯಕ್ಷತೆ ವಹಿಸಿದ್ದರು. ನಾಡಗೀತೆಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಅಕಾಡೆಮಿ ರಿಜಿಸ್ಟ್ರಾರ್ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ ಸ್ವಾಗತಿಸಿದರು. ಪ್ರಾಸ್ತಾವಿಕವಾಗಿ ಮಾತನಾಡಿದ ಅಕಾಡೆಮಿ ಸದಸ್ಯ ಡಾ॥ ಬಾಳಾಸಾಹೇಬ ಲೋಕಾಪೂರ ಅವರು ಅಕಾಡೆಮಿ ಸಾಗಿಬಂದ ದಾರಿಯನ್ನು ವಿವರಿಸಿ ೨೦೩ ಲೇಖಕರಿಗೆ ಈವರೆಗೆ ಪ್ರಶಸ್ತಿ ನೀಡಲಾಗಿದೆ ಎಂದರು. ಸಹ ಸದಸ್ಯೆ ಶ್ರೀಮತಿ ಶಾರದಾ ಮುಳ್ಳೂರ ವಂದಿಸಿದರು. ಪ್ರೊ॥ ಎಸ್.ಡಿ. ಕೆಂಗಲಗುತ್ತಿ ಕಾರ್ಯಕ್ರಮ ನಿರೂಪಿಸಿದರು.

*ಸೌಜನ್ಯ: ಸಂಯುಕ್ತ ಕರ್ನಾಟಕ*

# ಅಕಾಡೆಮಿ ಮೇಲೆ ಸವಾರಿ ಬೇಡ : ಡಾ॥ ಬರಗೂರು

**ಸಾಂ**ಸ್ಕೃತಿಕ ಸ್ವಾಯತ್ತ ಸಂಸ್ಥೆಗಳಾಗಿರುವ ಅಕಾಡೆಮಿಗಳ ಹಕ್ಕುಗಳನ್ನು ಕಸಿಯವ ನೀತಿ, ನಿಯಮಗಳಿಗೆ ತಿದ್ದುಪಡಿ ತರುವ ಅಗತ್ಯವಿದೆ ಎಂದು ನಾಡಿನ ಹಿರಿಯ ಸಾಹಿತಿ ಡಾ॥ ಬರಗೂರು ರಾಮಚಂದ್ರಪ್ಪ ಅಭಿಪ್ರಾಯಪಟ್ಟಿದ್ದಾರೆ.

ಅಕಾಡೆಮಿಗಳ ಸ್ವಾಯತ್ತತೆಯನ್ನು ಕಸಿಯುವ ಕ್ರಮ ಸರಿಯಲ್ಲ. ಸರ್ಕಾರ ಅಕಾಡೆಮಿಗಳಿಗೆ ಕೇವಲ ಸಲಹೆ ನೀಡಬಹುದಷ್ಟೇ. ಸೂಚನೆಯನ್ನಲ್ಲ. ಈ ನಿಟ್ಟಿನಲ್ಲಿ ಕೆಲವೊಂದು ನೀತಿ, ನಿಯಮಗಳನ್ನು ತಿದ್ದುಪಡಿ ಮಾಡಿ ಅಕಾಡೆಮಿಗಳನ್ನು ಸಾಂಸ್ಕೃತಿಕ ಸ್ವಾಯತ್ತತೆ ಸಂಸ್ಥೆಗಳನ್ನಾಗಿಸಬೇಕು. ಹಣಕಾಸಿನ ಕುರಿತಾಗಿ ನಿಯಂತ್ರಣ ಹೇರಿ, ಆದರೆ ಸಾಂಸ್ಕೃತಿಕ ನಿಯಂತ್ರಣ ಹೇರಬೇಡಿ ಎಂದು ಬರಗೂರು ಸರ್ಕಾರಕ್ಕೆ ಸಲಹೆ ಮಾಡಿದರು.

**ಅಕಾಡೆಮಿ ನೌಕರರು:** ಸಾಕಷ್ಟು ಅಕಾಡೆಮಿಗಳಲ್ಲಿನ ಸಿಬ್ಬಂದಿ ದಿನಗೂಲಿಗಳಾಗಿದ್ದಾರೆ. ಅವರನ್ನು ಕಾಯಂಗೊಳಿಸಿದರೆ ಸಾಂಸ್ಕೃತಿಕ ಜಗತ್ತಿಗೆ ಕೊಂಚ ನೆರವಾದೀತು ಎಂದರು.

**ಪ್ರಶಸ್ತಿ ತಾರತಮ್ಯ ಬೇಡ:** ಸರ್ಕಾರ ಹಾಗೂ ಖಾಸಗಿ ಪ್ರಶಸ್ತಿ ನೀಡಿಕೆಯಲ್ಲಿ ಯಾವುದೇ ತಾರತಮ್ಯ ಇರದೇ ಏಕರೂಪ ಕಂಡು ಬರಲಿ. ಸರ್ಕಾರ ನೀಡಿದ ಪ್ರಶಸ್ತಿಗಳಲ್ಲಿ ಸಾಮಾಜಿಕ, ಪ್ರಾದೇಶಿಕ ನ್ಯಾಯದ ಕೂಗು ಕೇಳಿಬಂದರೆ, ಖಾಸಗಿ ಸಂಸ್ಥೆಗಳು ನೀಡುವ ಪ್ರಶಸ್ತಿಯಲ್ಲಿ ಈ ಕೂಗು ಯಾಕೆ ಕೇಳಿಬರುವುದಿಲ್ಲ ಎಂದು ಅವರು ಪ್ರಶ್ನಿಸಿದರು.

ಬದಲಾದ ಕಾಲಘಟ್ಟದಲ್ಲಿ ಪ್ರತಿರೋಧದ ನೆಲೆಗಟ್ಟುಗಳು ಕ್ಷೀಣಿಸುತ್ತಿವೆ. ಅನಾದಿ ಕಾಲದಿಂದಲೂ ಕನ್ನಡ ಸಾಹಿತ್ಯ ಲೋಕದ ಕವಿಗಳು, ಧೀಮಂತರು, ಸಾಹಿತ್ಯ ಸೇವಕರು ಪ್ರತಿರೋಧದ ಅಲೆಯಲ್ಲಿಯೇ ಬೆಳೆದು ಬಂದವರಾಗಿದ್ದರು. ಖಾಸಗೀಕರಣದ ಅಪಾಯದಡಿಯಲ್ಲಿಯೇ ನಾವು ನಿಂತು ಪ್ರತಿಕ್ಷೇತ್ರದಲ್ಲೂ ನಾವು ಹಿಂದೆ ಬಂದಿದ್ದೇವೆ ಎಂದರು.

ಕನ್ನಡ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ॥ ಎಂ.ಎಚ್. ಕೃಷ್ಣಯ್ಯ ಅಧ್ಯಕ್ಷತೆ ವಹಿಸಿದ್ದರು. ಗೌರವ ಪ್ರಶಸ್ತಿ ಪಡೆದ ಎಚ್.ಎಂ. ಬೀಳಗಿ, ವಿಷ್ಣು ನಾಯ್ಕ, ಮಲ್ಲಿಕಾರ್ಜುನ ಹಿರೇಮಠ, ಲಕ್ಷ್ಮಣ ಸೇರಿದಂತೆ (ಅರಾ ಮಿತ್ರ ಗೈರು) ಪುಸ್ತಕ ಪ್ರಶಸ್ತಿ ಪಡೆದ ೧೨ ಜನರು (೧೮ ಮಂದಿಯಲ್ಲಿ ಆರು ಮಂದಿ ಗೈರು) ಪ್ರಶಸ್ತಿ ಸ್ವೀಕರಿಸಿದರು.

ರಿಜಿಸ್ಟ್ರಾರ್ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಸ್ವಾಗತಿಸಿದರೆ, ಅಕಾಡೆಮಿ ಸದಸ್ಯ ಡಾ॥ ಬಾಳಾ ಸಾಹೇಬ್ ಲೋಕಾಪುರ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ॥ ಮೃತ್ಯುಂಜಯ ರುಮಾಲೆ, ಅಬ್ಬಾಸ ಮೇಲಿನಮನಿ, ವಿ.ಎಸ್. ಕಟಗಿಹಳ್ಳಿಮಠ, ದೊಡ್ಡಣ್ಣ ಗದ್ದನಕೇರಿ, ಶ್ರೀಶೈಲ ಕರಿಶಂಕರಿ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು ಎಸ್.ಡಿ. ಕೆಂಗಲಗುತಿ ಕಾರ್ಯಕ್ರಮ ನಿರೂಪಿಸಿದರು.

## ವಿಷ್ಣು ನಾಯ್ಕ ಇನ್ನೊಬ್ಬ ದಿನಕರ ದೇಸಾಯಿ: ಅಂಬಾತನಯ

ಸಾಹಿತಿ ವಿಷ್ಣು ನಾಯ್ಕ ಕ್ರಾಂತಿಕಾರಿ ಸಾಹಿತಿಗಳಾಗಿ ಕಲ್ಪನಾ ಲೋಕದಲ್ಲಿ ವಿಹರಿಸಿ ಉತ್ತಮ ಸಾಹಿತ್ಯ ಕೃತಿಗಳನ್ನು ನೀಡಿದ್ದಾರೆ. ವಿಷ್ಣು ನಾಯ್ಕ ಅವರು ಇನ್ನೊಬ್ಬ ದಿನಕರ ದೇಸಾಯಿ. ಅಂತಹ ವ್ಯಕ್ತಿತ್ವ ಹೊಂದಿದ್ದಾರೆ ಎಂದು ಹಿರಿಯ ಸಾಹಿತಿ ಅಂಬಾತನಯ ಮುದ್ರಾಡಿ ಹೇಳಿದರು.

ಸ್ವಾರ್ಥ ಇಲ್ಲದ ಪ್ರೀತಿ ಎಲ್ಲಿ ಸಿಗುತ್ತದೆಂಬುದನ್ನು ಹುಡುಕಬೇಕಾಗಿದೆ. ಈ ನಾಡಿನಲ್ಲಿ ಎಲ್ಲರೂ ಕವಿಗಳೆ ನಂತರ ಕಥೆಗಾರ, ನಾಟಕಕಾರ, ಹಾಸ್ಯ ಬರಹಗಾರರು ಆಗುತ್ತಾರೆ. ವಿಷ್ಣು ನಾಯ್ಕ ಉತ್ತಮ ಸಾಧಕರಾಗಿದ್ದಾರೆಂದು ಹೇಳಿದರು.

ಶ್ರೀಮತಿ ಎಚ್.ಎಂ. ಬೀಳಗಿ ಅವರ ಕುರಿತು ಡಾ॥ ಶಾಂತಾ ಇಮ್ರಾಪೂರ ಮಾತನಾಡಿ, ಹಿಂದೂ-ಮುಸ್ಲಿಂ ಸಮುದಾಯದ ಕೊಂಡಿಯಂತಾಗಿ ಸಮಾಜ ಕಟ್ಟುವ ಕೆಲಸ ಮಾಡಬಲ್ಲ ಸಮರ್ಥ ವ್ಯಕ್ತಿತ್ವ ಹೊಂದಿದ್ದಾರೆ. ಬೀಳಗಿಯವರು ವೈಚಾರಿಕ ಪ್ರತಿಭೆವುಳ್ಳವರು. ಸ್ವಾವಲಂಬನೆ ಬದುಕನ್ನು ಕಟ್ಟಿಕೊಂಡು ನಾಡಿನ ಹೆಸರಾಂತ ಸಾಹಿತಿಗಳಲ್ಲೊಬ್ಬರು. ಸ್ವಪರಿಶ್ರಮದಿಂದ ಉನ್ನತ ಸ್ಥಾನಕ್ಕೇರಿದ ವ್ಯಕ್ತಿ ಎಂದರು.

## ನಾಡಿನ ಶ್ರೇಷ್ಠ ಹಾಸ್ಯ ಸಾಹಿತಿ

ಪ್ರೊ॥ ಅ.ರಾ.ಮಿತ್ರ ಅವರ ಬದುಕು ಬರಹ ಕುರಿತು ಡಾ॥ ಬಿ.ವಿ. ವಸಂತಕುಮಾರ ಮಾತನಾಡಿ, ಮನುಷ್ಯನನ್ನು ಹಾಸ್ಯದ ವಸ್ತು ಮಾಡದೆ, ಹಾಸ್ಯವನ್ನೇ ಮನುಷ್ಯನನ್ನಾಗಿಸುವ ಕಲೆ ಅವರಲ್ಲಿದೆ. ಮಿತ್ರರು ನಗುವ ಅನೇಕ ವಿಧಾನಗಳನ್ನು ಓದುಗರಿಗೆ ನೀಡಿದ್ದಾರೆ. ಸನ್ನಿವೇಶ, ಘಟನೆ, ವ್ಯಕ್ತಿಗಳನ್ನು ಹಾಸ್ಯದ ವಸ್ತುಗಳನ್ನಾಗಿಸಿಕೊಂಡು ಸಾಹಿತ್ಯಕ ಶ್ರೀಮಂತಗೊಳಿಸಿದ್ದಾರೆ ಎಂದರು.

ಡಾ॥ ವಿಜಯಕುಮಾರ ಕಟಗಿಹಳ್ಳಮಠ ಅವರು ಸಾಹಿತಿ ಮಲ್ಲಿಕಾರ್ಜುನ ಹಿರೇಮಠ ಬಗ್ಗೆ ಮಾತನಾಡಿ ಅವರು ಮಾನವೀಯ ಕಾಳಜಿಯುಳ್ಳ ಕಥಾ ವಸ್ತುವಿಗೆ ಹೆಚ್ಚಿನ ಆದ್ಯತೆ ನೀಡಿ ಕೃತಿ ರಚಿಸಿದ್ದಾರೆ. ಲಂಬಾಣಿ ಜನಾಂಗದ ಬದುಕು-ಜೀವನ-ಪರಿಶ್ರಮ ಶ್ರಮಜೀವಿಗಳಾಗಿರುವ ಬಗ್ಗೆ ಸಾಹಿತ್ಯದಲ್ಲಿ ಚಿತ್ರಿಸಿದ್ದಾರೆ.

ಸತತ ಅಧ್ಯಯನಶೀಲರಾಗಿ ಶ್ರಮಿಕ ವರ್ಗದ ಬದುಕು-ಬಡತನ, ಸಾಮಾಜಿಕ ಮೌಲ್ಯಗಳ ಚಿಂತಿಸುವ ಕೃತಿ ಹೊರಬಂದಿವೆ ಎಂದು ಹೇಳಿದರು.

ಸಾಹಿತಿ ಲಕ್ಷ್ಮಣರ ಕುರಿತು ಡಾ॥ ವಡ್ಡಗೆರೆ ನಾಗರಾಜಯ್ಯ ಮಾತನಾಡಿ, ಲಕ್ಷ್ಮಣ ಮುಗ್ಧ ಲೇಖಕ, ಹೋರಾಟಗಾರ. ದಲಿತ ಸಾಹಿತಿಯಾಗಿ ದಲಿತರ ಹಕ್ಕಿಗಾಗಿ ಹೋರಾಡಿ ತಮ್ಮ ನಿಜಜೀವನ ಘಟನೆಗಳ ಸಾಹಿತ್ಯಿಕ ಕೃತಿಗಳ ಜೀವನಾಡಿಯಾಗಿವೆ ಎಂದು ಹೇಳಿದರು.

ದಲಿತಕೇರಿಯಿಂದ ದಕ್ಷಿಣ ಕೊರಿಯಾ ಕಂಡ ಲಕ್ಷ್ಮಣರಿಗೆ ಸಿಕ್ಕ ಪುರಸ್ಕಾರ ನಿಜಕ್ಕೂ ಹೆಮ್ಮೆಯ ವಿಷಯವೆಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯೆ ಶಾರದಾ ಮುಳ್ಳೂರು ಸ್ವಾಗತಿಸಿದರು. ವಿನಾಯಕ ಕುಲಕರ್ಣಿ ನಿರೂಪಿಸಿದರು. ಅಕಾಡೆಮಿ ಸದಸ್ಯ ಬಾಳಾಸಾಹೇಬ ಲೋಕಾಪೂರ ವಂದಿಸಿದರು.

ಸೌಜನ್ಯ: ಕನ್ನಡ ಪ್ರಭ

# ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರದಾನ : ಜಿಲ್ಲೆಗೆ ಸಂಭ್ರಮ

*ಜಮಖಂಡಿಯಲ್ಲಿ ಐವರು ಸಾಹಿತಿಗಳಿಗೆ ಅಕಾಡೆಮಿ ಪ್ರಶಸ್ತಿ ಪ್ರದಾನ ಇವರಲ್ಲಿ ಇಬ್ಬರು ಬಾಗಲಕೋಟೆಯವರು*

**ಅ**ಲ್ಲಿ ನೆರೆದಿದ್ದವರ ಮನದಲ್ಲಿ ಒಂಥರಾ ಗತ್ತಿತ್ತು, ರಾಜಧಾನಿಯಲ್ಲಿ ನಡೆಯುವಂತಹ ಕಾರ್ಯಕ್ರಮವನ್ನು ತಮ್ಮ ಜಿಲ್ಲೆಯಲ್ಲಿಯೇ ನೋಡುತ್ತಿದ್ದ ಹೆಮ್ಮೆ ಅಡಗಿತ್ತು. ಆದ್ದರಿಂದಲೇ ಸಭಾಂಗಣ ಚಿಕ್ಕದಿದ್ದರೂ ಸಾಹಿತ್ಯಾಸಕ್ತರು ಕಿಕ್ಕಿರಿದು ತುಂಬಿದ್ದರು.

ಇದು ಜಮಖಂಡಿಯ ಬಸವ ಭವನದಲ್ಲಿ ಮಂಗಳವಾರ ಸಂಜೆ ನಡೆದ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಗೋಚರಿಸಿದ ಸಂಗತಿಗಳು...

ಬಾಗಲಕೋಟೆ ಜಿಲ್ಲೆಯವರೇ ಆದ ಐವರು ಸಾಹಿತಿಗಳಿಗೆ ಜಿಲ್ಲೆಯ ಜನತೆಯ ಸಮ್ಮುಖದಲ್ಲಿ ಸಾಹಿತ್ಯದ ಮೇರು ಪ್ರಶಸ್ತಿ ನೀಡಿದಾಗ ಆನಂದಭಾಷ್ಪದೊಂದಿಗೆ ಅವುಗಳನ್ನು ಸಾಹಿತಿಗಳು ಸ್ವೀಕರಿಸಿದರು. ನಾಡಿನ ಧೀಮಂತ ಸಾಹಿತಿಗಳು, ಚಿಂತಕರು, ಭಾಷಾ ಪ್ರೌಢಿಮೆ ಮೆರೆದವರನ್ನು ಸಮೀಪದಿಂದ ನೋಡುವ ಅವಕಾಶ ಅಲ್ಲಿದ್ದವರಿಗೆ ಲಭ್ಯವಾಗಿತ್ತು.

### ಅಲ್ಲಿ ರಾಜಕಾರಣಿಗಳು ಇರಲಿಲ್ಲ

ಉಳಿದ ಕಾರ್ಯಕ್ರಮಗಳಂತೆ ಇಲ್ಲಿಯೂ ರಾಜಕಾರಣಿಗಳು, ಮಂತ್ರಿಗಳು ಠಳಾಯಿಸಿರದೆ ಕೇವಲ ಸಾಹಿತಿಗಳು, ಸಾಹಿತ್ಯಾಸಕ್ತರು ಮಾತ್ರ ಪಾಲ್ಗೊಂಡಿದ್ದು ವಿಶೇಷ ಕಳೆಗೆ ಕಾರಣವಾಗಿತ್ತು.

ಐದು ಜನ ಗೌರವ ಪ್ರಶಸ್ತಿ ಪಡೆದ ಮಹನೀಯರಲ್ಲಿ ಅರಾ ಮಿತ್ರ ಗೈರಾಗಿದ್ದರು. ಪ್ರಶಸ್ತಿ ಸ್ವೀಕರಿಸಿದ ಉಳಿದ ನಾಲ್ವರಲ್ಲಿ ಇಬ್ಬರು ಬಾಗಲಕೋಟೆ ಜಿಲ್ಲೆಯವರು. ಎಚ್.ಎಂ. ಬೀಳಗಿ, ಮಲ್ಲಿಕಾರ್ಜುನ ಹಿರೇಮಠ, ಲಕ್ಷ್ಮಣ್, ವಿಷ್ಣು ನಾಯ್ಕ ಗೌರವ ಪ್ರಶಸ್ತಿ ಸ್ವೀಕರಿಸಿದರು.

೨೦೦೭ರ ಪುಸ್ತಕ ಬಹುಮಾನ ಪ್ರಕಟವಾಗಿದ್ದು ೧೮ ಜನರಿಗೆ. ೬ ಮಂದಿ ಗೈರಾಗಿದ್ದರೆ, ಗಣೇಶ ಅಮೀನಗಡ, ಬಸವರಾಜ ಹೂಗಾರ, ಸಂಗಮೇಶ ಕೋಟಿ (ಎಲ್ಲರೂ ಬಾಗಲ ಕೋಟೆ ಜಿಲ್ಲೆಯವರು). ಬಸವರಾಜ ವಕ್ಕುಂದ, ನೇಮಿಚಂದ್ರ, ಮಹ್ಮದ್ ಕುಳಾಯಿ, ಪ್ರೊ॥ ಎಸ್.ಜಿ. ಸಿದ್ಧರಾಮಯ್ಯ, ಪ್ರೊ॥ ಎಚ್.ಎಲ್. ಕೇಶವಮೂರ್ತಿ, ನಾ. ಸು. ಭರತನಹಳ್ಳಿ, ಡಾ॥ ಹಾಲತಿ ಸೋಮಶೇಖರ್, ಚಂದ್ರಕಾಂತ ಪೋಕಳೆ, ಪಿ.ಸಿ. ಅಂತೋನಿ ಸ್ವಾಮಿ ಪ್ರಶಸ್ತಿ ಪಡೆದರು.

ರಾಜಧಾನಿಯಲ್ಲೇ ನಡೆಯುತ್ತಿದ್ದ ವಿವಿಧ ಅಕಾಡೆಮಿಗಳ ಪ್ರಶಸ್ತಿ ಪ್ರದಾನ ಸಮಾರಂಭವನ್ನು ತಾಲೂಕು ಕೇಂದ್ರವೊಂದರಲ್ಲಿ ನಡೆಸಿದ್ದು ಸಾಹಿತ್ಯ ಅಕಾಡೆಮಿ ಇತಿಹಾಸದಲ್ಲಿಯೇ ಮೊದಲು. ಇದುವರೆಗೂ ೨೩೩ ಲೇಖಕ, ಲೇಖಕಿಯರು ಅಕಾಡೆಮಿ ಪ್ರಶಸ್ತಿ ಪಡೆದಿದ್ದಾರೆ. ಒಂದೇ ವರ್ಷದಲ್ಲಿ ಜಿಲ್ಲೆಯವರೇ ಇಬ್ಬರು ಪ್ರಶಸ್ತಿ ಪಡೆದದ್ದು ಇದು ೨ನೇ ಬಾರಿಗೆ. ಹಿಂದೊಮ್ಮೆ ಅವಿಭಜಿತ ಜಿಲ್ಲೆ ಬಿಜಾಪುರದಿಂದ ಶ್ರೀರಂಗ, ರಂ.ಶ್ರೀ. ಮುಗಳಿ ಅವರು ಪ್ರಶಸ್ತಿ ಪಡೆದಿದ್ದಾರೆ, ಈ ಬಾರಿ ಮಲ್ಲಿಕಾರ್ಜುನ ಹಿರೇಮಠ ಹಾಗೂ ಎಚ್.ಎಂ. ಬೀಳಗಿ ಅವರು ಪ್ರಶಸ್ತಿ ಪಡೆದು ಜಿಲ್ಲೆಯ ಗೌರವವನ್ನು ಇನ್ನಷ್ಟು ಹೆಚ್ಚಿಸಿದ್ದಾರೆ.

### ಆಕರ್ಷಿಸಿದ ಡೊಳ್ಳು ಕುಣಿತ

ಎ.ಜಿ. ದೇಸಾಯಿ ಸರ್ಕಲ್‌ನಿಂದ ಬಸವ ಭವನದ ವರೆಗೆ ಎಲ್ಲ ಪ್ರಶಸ್ತಿ ವಿಜೇತರನ್ನು ಕರೆತರುವ ಮೆರವಣಿಗೆಗೆ ಮೇಘರಾಯನೂ ಕೊಂಚ ಸ್ವಾಗತ ನೀಡಿದ. ಆಕರ್ಷಕವಾಗಿ ಡೊಳ್ಳು ಕುಣಿತ ಒಂದೆಡೆಯಾದರೆ ಹಲಗೆ ಮೇಳವೂ ರಂಜಿಸಿತು.

*ಸೌಜನ್ಯ: ವಿಜಯ ಕರ್ನಾಟಕ*


**ಕರ್ನಾಟಕ ಸಾಹಿತ್ಯ ಅಕಾಡೆಮಿಯ ಜಾಲತಾಣ ವ್ಯವಸ್ಥೆ**

ಅಧ್ಯಕ್ಷರು
**ಪ್ರೊ. ಎಂ.ಎಚ್. ಕೃಷ್ಣಯ್ಯ**

| *ಜಾಲತಾಣ ಸಂಪಾದಕರು* | *ತಾಂತ್ರಿಕ ಸಂಪಾದಕರು* | *ಸಾಹಿತ್ಯ ಸಂಪಾದಕರು* |
|---|---|---|
| **ಶ್ರೀ ಜಿ.ಎನ್. ನರಸಿಂಹಮೂರ್ತಿ** | **ಶ್ರೀ ಕೆ.ಎಸ್. ನವೀನ್** | **ಶ್ರೀ ಎಲ್.ಎನ್. ಮುಕುಂದರಾಜ್** |

ಸಲಹೆಗಾರರು : **ಶ್ರೀ ಶ್ಯಾಮಸುಂದರ್, ಶ್ರೀ ಎನ್.ಎ. ಎಂ. ಇಸ್ಮಾಯಿಲ್, ಶ್ರೀ ಎಚ್.ಪಿ. ನಾಡಿಗ್, ಶ್ರೀ ಎನ್. ವಿದ್ಯಾಶಂಕರ್**

**ನಮ್ಮ ಜಾಲತಾಣಕ್ಕೆ ಭೇಟಿ ಕೊಡಿ : "karnatakasahithyaacademy.org"**
**ನಿಮ್ಮ ಸಲಹೆ ಮತ್ತು ಪ್ರತಿಕ್ರಿಯೆಗಳಿಗೆ ಸದಾ ಸ್ವಾಗತವಿದೆ**

# ‘ವಿಶ್ವಮಾನವತ್ವ’ ಪ್ರಥಮ ಪ್ರತಿಪಾದಕ ಗೋಕಾಕ



**ಜ್ಞಾನಪೀಠ ಪುರಸ್ಕೃತ ವಿನಾಯಕ ಕೃಷ್ಣ ಗೋಕಾಕ ಅವರ ಜನ್ಮಶತಾಬ್ಧಿ ಕಾರ್ಯಕ್ರಮ ಉದ್ಘಾಟಿಸುತ್ತಿರುವ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ, ನ್ಯಾ. ರಾಮಾಜೋಯಿಸ್, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಯು.ಆರ್. ಅನಂತಮೂರ್ತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಮನುಬಳಿಗಾರ್ ಉಪಸ್ಥಿತರಿದ್ದರು.**

**ಜ್ಞಾ**ನಪೀಠ ಪುರಸ್ಕೃತ ವಿನಾಯಕ ಕೃಷ್ಣ ಗೋಕಾಕ ಅವರು ವಿಶ್ವಮಾನವ ಪರಿಕಲ್ಪನೆಯನ್ನು ಕುವೆಂಪು ಅವರಿಗಿಂತ ಮುಂಚೆಯೇ ಕನ್ನಡದ ಸಂದರ್ಭದಲ್ಲಿ ಪ್ರತಿಪಾದಿಸಿದ್ದರು ಎಂದು ಡಾ॥ ಜಿ.ಎಸ್. ಶಿವರುದ್ರಪ್ಪ ಹೇಳಿದ್ದಾರೆ.

‘ಪ್ರೊ॥ ವಿ.ಕೃ. ಗೋಕಾಕ್ ಜನ್ಮಶತಾಬ್ದಿ ೨೦೦೯’ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಗೋಕಾಕರು ಕನ್ನಡ ಹಾಗೂ ಇಂಗ್ಲಿಷ್‌ನಲ್ಲಿ ಬರೆಯುತ್ತಾ ಅಂತಾರಾಷ್ಟ್ರೀಯ ಮಟ್ಟದಲ್ಲಿ ಕನ್ನಡದ ಹಿರಿಮೆಯನ್ನು ಎತ್ತಿಹಿಡಿದರು ಎಂದರು. ಶ್ರೇಷ್ಠ ಪ್ರಾಧ್ಯಾಪಕರಾಗಿದ್ದ ಗೋಕಾಕರದು ಕಂಠದಲ್ಲಿ ಮಿಂಚು, ಕೊರಳಲ್ಲಿ ಗುಡುಗು. ೧ರಿಂದ ೧೦ನೇ ತರಗತಿವರೆಗೆ ಕನ್ನಡವೇ ಏಕೈಕ ಪ್ರಥಮ ಭಾಷೆ ಆಗಬೇಕೆಂಬ ತೀರ್ಪುಕೊಟ್ಟರು. ಅದಕ್ಕಾಗಿ ನಾಡಿನಲ್ಲಿ ನಡೆದ ಚಳವಳಿ ಗೋಕಾಕ್ ಚಳವಳಿಯೇ ಆಯಿತು ಎಂದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಅಧ್ಯಕ್ಷರಾದ ಮೊದಲ ಕನ್ನಡಿಗ ಗೋಕಾಕರು. ಬೆಂಗಳೂರು ಕುಲಪತಿಗಳಾಗಿದ್ದಾಗ ‘ಸಮನ್ವಯ’ ಪತ್ರಿಕೆಯನ್ನು ಪ್ರಕಟಿಸುತ್ತಿದ್ದರು. ಆ ಪತ್ರಿಕೆಗೆ ನಾನೂ ಒಬ್ಬ ಸಂಪಾದಕನಾಗಿದ್ದೆ. ನಾನು ‘ಸಮನ್ವಯ ಕವಿ’ ಎಂದು ಹೆಸರು ಪಡೆಯಲು ಅದೂ ಒಂದು ಕಾರಣ ಇರಬೇಕು. ವರಕವಿ ಬೇಂದ್ರೆ ಅವರನ್ನು ತಮ್ಮ ಗುರು ಎಂದು ಸ್ವೀಕರಿಸಿದ್ದ ಗೋಕಾಕರ ಪಯಣ ಯಾವತ್ತೂ ಲೌಕಿಕತೆಯಿಂದ ಆಧ್ಯಾತ್ಮದ ಕಡೆಗೆ ಇತ್ತು ಎಂದರು.

ಗೋಕಾಕರದು ರಾಜಾರಾಮ್ ಮೋಹನ್‌ರಾಯ್, ಅರವಿಂದರ ಪಥದಲ್ಲಿ ಸಾಗಿದ ಮನಸ್ಸು, ವೈದಿಕ ಬಿಟ್ಟು, ಲೌಕಿಕವನ್ನು ನಂತರ ಆಧ್ಯಾತ್ಮವನ್ನು ಆವಾಹಿಸಿಕೊಂಡವರು ಎಂದು ಜ್ಞಾನಪೀಠ ಪುರಸ್ಕೃತ ಡಾ. ಯು.ಆರ್. ಅನಂತಮೂರ್ತಿ ಹೇಳಿದರು.

ಗೋಕಾಕರ ‘ಸಮರಸವೇ ಜೀವನ’ ಕೃತಿಯ ಇಂಗ್ಲಿಷ್ ಅನುವಾದ ಕೃತಿ ‘ದಿ ಅಗೋನಿ ಅಂಡ್ ಗ್ಲೋರಿ’ ಮತ್ತು ಗೋಕಾಕರ ಸಮುದ್ರ ಗೀತೆಗಳ ಸೀಡಿಯನ್ನು ಅವರು ಬಿಡುಗಡೆ ಮಾಡಿದರು. ಪ್ರೊ. ಗೋಕಾಕರ ಸಾಹಿತ್ಯ ಎಷ್ಟು ದೊಡ್ಡದೋ ಅವರ ವ್ಯಕ್ತಿತ್ವವೂ ಅಷ್ಟೇ ದೊಡ್ಡದಾಗಿತ್ತು ಎಂದು ಪ್ರೊ॥ ಎಲ್.ಎಸ್. ಶೇಷಗಿರಿರಾವ್ ಹೇಳಿದರು. ‘ಸಮರಸವೇ ಜೀವನ’ ಕೃತಿಯನ್ನು ‘ದಿ ಅಗೋನಿ ಅಂಡ್ ಗ್ಲೋರಿ’ ಭಾಷಾಂತರಿಸಿದ ಗೋಕಾಕರ ಪುತ್ರಿ ಯಶೋಧರ ಭಟ್ ಅವರು, ಕೃತಿ ಭಾಷಾಂತರ ಮಾಡಿದ ಹಿನ್ನೆಲೆಯನ್ನು ಹೇಳಿಕೊಂಡರು.

ಮಾಜಿ ರಾಜ್ಯಪಾಲ ನ್ಯಾ। ರಾಮಾಜೋಯಿಸ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಮನು ಬಳಿಗಾರ್ ಮಾತನಾಡಿದರು. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ॥ ಎಂ.ಎಚ್. ಕೃಷ್ಣಯ್ಯ ಅಧ್ಯಕ್ಷತೆ ವಹಿಸಿದ್ದರು.

*ಸೌಜನ್ಯ: ಕನ್ನಡಪ್ರಭ*

p

# ‘ವಿಶ್ವಮಾನವ’ ಪರಿಚಯಿಸಿದ್ದು ವಿ.ಕೃ. ಗೋಕಾಕ್: ಜಿಎಸ್ಸೆಸ್

ಗೋಕಾಕ್‌ರ ಕಾವ್ಯದ ತುಂಬಾ ಪಯಣದ ಆಶಯ, ಮಾನವೀಯ ಮೌಲ್ಯದ ವಿವೇಚನೆ ಇದೆ. ಎಲ್ಲಿಯೇ ಶೋಷಣೆ ನಡೆದರೂ ಅದನ್ನು ಖಂಡಿಸುತ್ತಿದ್ದರು ಎಂದರು.

ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ॥ ಯು.ಆರ್. ಅನಂತಮೂರ್ತಿ ಮಾತನಾಡಿ, ತನ್ನ ಘನತೆಯಲ್ಲೇ ನಂಬಿಕೆ ಇಟ್ಟವನು ಮಹತ್ವವಾದ ಕೃತಿ ಬರೆಯುತ್ತಾನೆ. ಇಂಥ ನಂಬಿಕೆ ಗೋಕಾಕ್ ಅವರಲ್ಲಿತ್ತು.



ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ವಿ.ಕೃ. ಗೋಕಾಕ್ ಜನ್ಮಶತಾಬ್ಧಿ ಸಮಾರಂಭದಲ್ಲಿ ಭಾಗವಹಿಸಿದ ಹಿರಿಯ ಸಾಹಿತಿಗಳು

ರಾಷ್ಟ್ರಕವಿ ಕುವೆಂಪು ಅವರ ‘ವಿಶ್ವಮಾನವ’ ಕಲ್ಪನೆಗಿಂತ ಮುಂಚೆಯೇ ವಿ.ಕೃ. ಗೋಕಾಕ್ ಆ ಶಬ್ದ ಪರಿಚಯಿಸಿದ್ದರು ಎಂದು ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಹೇಳಿದರು.

ಬಳ್ಳಾರಿಯಲ್ಲಿ ೧೯೫೮ರಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿ.ಕೃ. ಗೋಕಾಕ್ ಸಮ್ಮೇಳನಾಧ್ಯಕ್ಷರಾಗಿದ್ದರು. ತಮ್ಮ ಆ ಭಾಷಣದಲ್ಲೇ, ‘ವಿಶ್ವಮಾನವರಾಗಬೇಕು’ ಎಂದು ಆ ಪದದ ಅರ್ಥ ಮತ್ತು ವಿವರಣೆ ನೀಡಿದ್ದರು ಎಂದರು.

ಭಾರತೀಯ ವಿದ್ಯಾಭವನ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿ ೨-೮-೨೦೦೯ ಭಾನುವಾರ ಹಮ್ಮಿಕೊಂಡಿದ್ದ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ವಿ.ಕೃ. ಗೋಕಾಕ್ ಜನ್ಮಶತಾಬ್ದಿ ಕಾರ್ಯಕ್ರಮ ಉದ್ಘಾಟಿಸಿ ಅವರ ಮಾತನಾಡುತ್ತಿದ್ದರು.

ಗೋಕಾಕ್ ನವೋದಯ ಸಾಹಿತ್ಯವನ್ನು ಎತ್ತರಕ್ಕೆ ಹೆಚ್ಚಿಸಿದರು. ಕನ್ನಡ, ಇಂಗ್ಲಿಷ್ ಭಾಷೆಯಲ್ಲಿ ಬರೆಯುವ ಮೂಲಕ ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆದರು. ಕಾವ್ಯ, ನಾಟಕ, ಕಾದಂಬರಿ, ಕಾವ್ಯಮೀಮಾಂಸೆ ಸೇರಿದಂತೆ ಅವರ ಸಾಹಿತ್ಯ ವಿಸ್ತಾರ ಎಂಥವರಿಗೂ ಬೆರಗು ಹುಟ್ಟಿಸುತ್ತದೆ. ನವ್ಯ ಸಾಹಿತ್ಯದಲ್ಲಿ ಬರೆಯುತ್ತಿದ್ದ ಗೋಕಾಕರ ಬರಹ ಅರಳಿಕೊಳ್ಳುವ ಬದಲು ವಾಗ್ವಿಲಾಸ ನೆಲೆಯಲ್ಲಿ ಹೆಚ್ಚು ಉಳಿಯುತ್ತಿದ್ದವು ಎಂದರು.

ಗೋಕಾಕ್ ಅವರು ನನ್ನ ಕಾವ್ಯ ಗುರು ಬೇಂದ್ರೆ ಎಂದು ಹೇಳಿದರೂ, ಬೇಂದ್ರೆಗಿಂತ ತುಂಬಾ ಭಿನ್ನಮಾರ್ಗದಲ್ಲಿ ನಡೆದರು. ಬೇಂದ್ರೆಯವರನ್ನು ಅನುಕರಿಸಿದರೆ ಅನುಕರಣೆ ಕಾಣಿಸುತ್ತದೆ. ಗೋಕಾಕ್‌ರನ್ನು ಅನುಕರಿಸಿದರೆ ಬೇರೆ ವಿಚಾರಗಳನ್ನು ಹೇಳಲೂ ವೇದಿಕೆ ಸಿಗುತ್ತದೆ.

ಕುವೆಂಪು, ಅನಕೃ, ಗೋಕಾಕ್ ಅವರ ಕೃತಿಗಳಲ್ಲಿ ಭಾವುಕತೆಯ ಹುಡುಕಾಟ ನಡೆಯುತ್ತದೆ. ಭಾರತೀಯರಲ್ಲಿ ವೈದಿಕ ಸಂಪ್ರದಾಯ ಕಡಿಮೆಯಾಗಿ ಆಧ್ಯಾತ್ಮಿಕದ ಕಡೆ ಯೋಚನೆ ಬಂದಿದ್ದೆ ಇದಕ್ಕೆ ಕಾರಣ ಇರಬಹುದು ಎಂದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಮನು ಬಳಿಗಾರ್ ಮಾತನಾಡಿ ಗೋಕಾಕ್ ಅವರ ಸಮಗ್ರ ಕೃತಿಗಳನ್ನು ಹೊರತರುವುದು ಮತ್ತು ಅವರ ಜನ್ಮ ಸ್ಥಳವನ್ನು ಸ್ಮಾರಕವಾಗಿ ಮಾಡುವ ಉದ್ದೇಶ ಇದೆ ಎಂದರು.

ಗೋಕಾಕ್ ಅವರ ‘ಸಮರಸವೇ ಜೀವನ’ ಕಾದಂಬರಿಯನ್ನು ಗೋಕಾಕ್ ಪುತ್ರಿ ಯಶೋಧರ ಭಟ್ ಇಂಗ್ಲಿಷ್‌ಗೆ ಅನುವಾದಿಸಿದ ‘ದಿ ಅಗೋನಿ ಆ್ಯಂಡ್ ಗ್ಲೋರಿ’ ಮತ್ತು ಅವರ ಕಾವ್ಯದ ಗೀತೆಗಳ ಸಿ.ಡಿ. ಬಿಡುಗಡೆ ಮಾಡಲಾಯಿತು.

ಸಂಸದ ನ್ಯಾ. ರಾಮಾಜೋಯಿಸ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ॥ ಎಂ.ಎಚ್. ಕೃಷ್ಣಯ್ಯ, ಸಾಹಿತಿ ಪ್ರೊ॥ ಎಲ್.ಎಸ್. ಶೇಷಗಿರಿರಾವ್, ಗೋಕಾಕ್ ಅವರ ಮಕ್ಕಳಾದ ಯಶೋಧರಾ ಭಟ್, ಅನಿಲ್ ಗೋಕಾಕ್, ಭಾರತೀಯ ವಿದ್ಯಾಭವನ ಅಧ್ಯಕ್ಷ ಎನ್. ರಾಮಾನುಜ, ವಿನಾಯಕ ಗೋಕಾಕ್ ಟ್ರಸ್ಟ್ ಅಧ್ಯಕ್ಷ ಗಂಗಾಧರ ಶೆಟ್ಟಿ ಇದ್ದರು.

*ಸೌಜನ್ಯ: ದಿ ಟೈಮ್ಸ್ ಆಫ್ ಇಂಡಿಯಾ*



# ತಿರುವಳ್ಳುವರ್ ಪ್ರತಿಮೆಗೆ ವಿರೋಧ ಬೇಡ

'ತಮಿಳು ಕವಿ ತಿರುವಳ್ಳುವರ್ ಪ್ರತಿಮೆ ಸ್ಥಾಪನೆಯನ್ನು ಪಕ್ಷಾತೀತವಾಗಿ ಎಲ್ಲರೂ ಸ್ವಾಗತಿಸಬೇಕು' ಎಂದು ಹಿರಿಯ ಸಾಹಿತಿ ಡಾ॥ ಯು.ಆರ್. ಅನಂತಮೂರ್ತಿ ಕರೆ ನೀಡಿದರು.

ಕರ್ನಾಟಕ ಸಾಹಿತ್ಯ ಅಕಾಡೆಮಿಯು ಹಮ್ಮಿಕೊಂಡಿದ್ದ 'ಪ್ರೊ. ವಿ.ಕೃ. ಗೋಕಾಕ್ ಜನ್ಮ ಶತಾಬ್ದಿ' ಸಮಾರಂಭದಲ್ಲಿ ಅವರು ಮಾತನಾಡಿದರು.

'ಕನ್ನಡೇತರ ಮೂಲದಿಂದ ಬಂದವರು ಸಹ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ತೊಡಗಿಸಿಕೊಂಡು ಸಾಕಷ್ಟು ಕೊಡುಗೆ ನೀಡಿದ್ದಾರೆ. ತಿರುವಳ್ಳುವರ್ ಪ್ರತಿಮೆ ಸ್ಥಾಪನೆಗೆ ವಿರೋಧ ವ್ಯಕ್ತಪಡಿಸುವುದರಲ್ಲಿ ಅರ್ಥವಿಲ್ಲ' ಎಂದು ಅವರು ಅಭಿಪ್ರಾಯಪಟ್ಟರು.

'ಈ ಸಂಬಂಧ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇನೆ. ಬಿಜೆಪಿ ಪಕ್ಷಕ್ಕೆ ಬೆಂಬಲ ಇಲ್ಲದಿದ್ದರೂ ಸರ್ಕಾರದ ಈ ನಿರ್ಧಾರಕ್ಕೆ ನನ್ನ ಸಹಮತವಿದೆ' ಎಂದು ಪ್ರಕಟಿಸಿದರು.

'ಹಾಗೆಯೇ ಕನ್ನಡ ಮಾಧ್ಯಮದಲ್ಲೇ ಪ್ರಾಥಮಿಕ ಶಿಕ್ಷಣ ನೀಡಬೇಕು ಎಂಬ ಪ್ರಾಥಮಿಕ ಶಿಕ್ಷಣ ಸಚಿವರ ಉದ್ದೇಶ ಕೂಡ ಉತ್ತಮವಾಗಿದೆ. ಈ ಕಾರ್ಯಕ್ಕೂ ಎಲ್ಲರೂ ಬೆಂಬಲ ನೀಡಬೇಕು' ಎಂದು ಹೇಳಿದರು.

'ತಮ್ಮ ಘನತೆಯನ್ನು ಗಮನದಲ್ಲಿಟ್ಟುಕೊಂಡು ಮಹತ್ವದ ಕೃತಿಗಳನ್ನು ರಚಿಸಿದವರಲ್ಲಿ ವಿ.ಕೃ. ಗೋಕಾಕ್ ಪ್ರಮುಖರು. ಅವರು, ತಾವು ನಂಬಿದ್ದನ್ನು ಮಂಡಿಸುವುದರ ಜತೆಗೆ ಸಮರ್ಥನೆಯನ್ನೂ ನೀಡುತ್ತಿದ್ದರು. ಹೆಣ್ಣುಮಕ್ಕಳ ಬಗ್ಗೆ ಆಳವಾದ ಅಂತಃಕರಣವನ್ನು ವ್ಯಕ್ತಪಡಿಸುತ್ತಿದ್ದ ಅವರು, ಮಹಿಳೆಯರಿಗೆ ನೋವುಂಟು ಮಾಡುವ ಅನಿಷ್ಟ ಪದ್ಧತಿಗಳ ಬಗ್ಗೆ ತೀವ್ರ ವಿರೋಧ ವ್ಯಕ್ತಪಡಿಸಿದ್ದರು' ಎಂದು ಹೇಳಿದರು. ಸಮಾರಂಭ ಉದ್ಘಾಟಿಸಿದ ರಾಷ್ಟ್ರಕವಿ ಡಾ॥ ಜಿ.ಎಸ್. ಶಿವರುದ್ರಪ್ಪ ಮಾತನಾಡಿ, 'ಕುವೆಂಪು ಅವರ ವಿಶ್ವಮಾನವ ಪರಿಕಲ್ಪನೆ ಜನಪ್ರಿಯತೆ ಗಳಿಸಿದೆ. ಆದರೆ ಈ ವಿಶ್ವಮಾನವ ಪದ ಹಾಗೂ ವಿತರಣೆಯನ್ನು ವಿ.ಕೃ. ಗೋಕಾಕ್ ಹಿಂದೆಯೇ ನೀಡಿದ್ದರು' ಎಂದರು.

'ಗೋಕಾಕ್ ಅವರು ದ.ರಾ. ಬೇಂದ್ರೆ ಅವರನ್ನು ಕಾವ್ಯಗುರುವನ್ನಾಗಿ ಸ್ವೀಕರಿಸಿದ್ದರೂ ಭಾವಗೀತೆಗೆ ಬದಲಾಗಿ ಕಥನ ಹಾಗೂ ವರ್ಣನೆಯ ಮಾರ್ಗ ಅನುಸರಿಸಿ ಯಶಸ್ಸು ಕಂಡರು. ಭಾರತ ಇತಿಹಾಸದ ಅಮೂಲ್ಯ ಅಂಶಗಳನ್ನು ಬಳಸಿಕೊಂಡು ಆಧುನಿಕ ಮಾನವನ ಬದಲಾವಣೆಗಳನ್ನು ಅಕ್ಷರದಲ್ಲಿ ಕಟ್ಟಿಕೊಟ್ಟರು. ೧೦ನೇ ತರಗತಿಯವರೆಗೆ ಮಾತೃಭಾಷೆಯೇ ಏಕೈಕ ಪ್ರಥಮ ಭಾಷೆಯಾಗಿರಬೇಕು ಎಂದೂ ಅವರು ಪ್ರತಿಪಾದಿಸಿದರು' ಎಂದರು.

'ನವೋದಯ ಹಾಗೂ ನವ್ಯ ಕಾಲದ ಎತ್ತರದ ವ್ಯಕ್ತಿತ್ವಗಳ ಪೈಕಿ ಶತಮಾನದ ಗೌರವಕ್ಕೆ ಅವರು ಪಾತ್ರರಾಗಿದ್ದರು. ಅವರು ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳ ಮೇಲೆ ಪ್ರಭುತ್ವ ಸಾಧಿಸಿದ್ದರು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಇದೇ ಸಂದರ್ಭ 'ದಿ ಆ್ಯಗೋನಿ ಅಂಡ್ ಗ್ಲೋರಿ' ಅನುವಾದ ಕೃತಿ ಹಾಗೂ ಗೋಕಾಕ್ ಅವರ ಸಾಹಿತ್ಯ ಆಧಾರಿತ ಸಂಗೀತದ ಸಿ.ಡಿಯನ್ನು ಬಿಡುಗಡೆಗೊಳಿಸಲಾಯಿತು.

ರಾಜ್ಯಸಭಾ ಸದಸ್ಯ ಎಂ. ರಾಮಾಜೋಯಿಸ, ಅನುವಾದಕಿ ಯಶೋಧರ ಭಟ್, ಹಿರಿಯ ಸಾಹಿತಿ ಪ್ರೊ. ಎಲ್.ಎಸ್. ಶೇಷಗಿರಿರಾವ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಮನು ಬಳಿಗಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ॥ ಎಂ.ಎಚ್. ಕೃಷ್ಣಯ್ಯ, ಅನಿಲ್ ಗೋಕಾಕ್, ಭಾರತೀಯ ವಿದ್ಯಾಭವನದ ಅಧ್ಯಕ್ಷ ಎನ್. ರಾಮಾನುಜ ಉಪಸ್ಥಿತರಿದ್ದರು.

*ಸೌಜನ್ಯ: ಪ್ರಜಾವಾಣಿ*

# 'ಕನ್ನಡ ದಲಿತ ಸಾಹಿತ್ಯ ತುಂಬಾ ಬಡವಾಗಿದೆ'



ಮುಳ್ಳೂರು ನಾಗರಾಜ ಅವರ 'ಸಾಹಿತ್ಯ ಮತ್ತು ಹೋರಾಟ' ಕುರಿತ ವಿಚಾರ ಸಂಕಿರಣವನ್ನು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ. ಸಿದ್ಧಲಿಂಗಯ್ಯ ಮತ್ತು ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಪ್ರೊ. ಎಂ.ಎಚ್. ಕೃಷ್ಣಯ್ಯ, ಪ್ರೊ. ಕಾಳೇಗೌಡ ನಾಗವಾರ ಉದ್ಘಾಟಿಸುತ್ತಿರುವುದು

ಮುಳ್ಳೂರು ನಾಗರಾಜ ಅವರ ಪ್ರಕಟಿತ ಬರಹಗಳಿದ್ದರೆ ಅವುಗಳ ಹಕ್ಕುಗಳನ್ನು ನೀಡಿದರೆ ಪ್ರಾಧಿಕಾರದ ವತಿಯಿಂದ ಪ್ರಕಟಿಸುತ್ತೇವೆ ಎಂದು ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಸಿದ್ಧಲಿಂಗಯ್ಯ ಹೇಳಿದ್ದಾರೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ, ಡಾ॥ ಬಿ.ಆರ್. ಅಂಬೇಡ್ಕರ್ ಸಂಶೋಧನಾ ಹಾಗೂ ವಿಸ್ತರಣಾ ಕೇಂದ್ರದಿಂದ ೪, ಜುಲೈ ೨೦೦೯ರಂದು ಏರ್ಪಡಿಸಲಾಗಿದ್ದ 'ಮುಳ್ಳೂರು ನಾಗರಾಜ : ಸಾಹಿತ್ಯ ಮತ್ತು ಹೋರಾಟ' ಕುರಿತಾದ ವಿಚಾರ ಸಂಕಿರಣ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಸಾಹಿತ್ಯ ಲೋಕವನ್ನು ಬೆಳೆಸುವಲ್ಲಿ ಮುಳ್ಳೂರು ನಾಗರಾಜ ಅವರ ಪಾತ್ರವೂ ಪ್ರಮುಖವಾದದ್ದು. ದಲಿತ ಸಾಹಿತ್ಯದ ಮೂಲಕ ಕನ್ನಡ ಸಾಹಿತ್ಯದಲ್ಲಿ ಹೊಸ ಸಾಧ್ಯತೆಗಳನ್ನು ಅವರು ತೋರಿಸಿಕೊಟ್ಟಿದ್ದಾರೆ. ಅವರ ಹಲವು ಅಪ್ರಕಟಿತ ಬರಹಗಳು ಹಾಗೆ ಉಳಿದುಕೊಂಡಿರುವುದು ನನ್ನ ಗಮನಕ್ಕೆ ಬಂದಿದೆ. ಅಂಥ ಬರಹಗಳು ಇದ್ದಲ್ಲಿ ಹಾಗೂ ಹಕ್ಕು ಹೊಂದಿರುವವರು ನಮಗೆ ನೀಡಿ ಸಹಾಯ ಮಾಡಬಹುದು ಎಂದು ಹೇಳಿದರು.

ಬಡತನ ಒಂದು ಶಕ್ತಿ. ಪ್ರತಿಭಟನೆ ಹೋರಾಟ ಪ್ರಮುಖವಾದ ಅಸ್ತ್ರ. ಆದರೆ ನಮ್ಮ ಇಂದಿನ ದಲಿತ ಹೋರಾಟಗಾರಿಗೆ ಪ್ರತಿಭಟನೆ ಮನೋಭಾವವೇ ಹೊರಟು ಹೋಗಿದೆ. ದಲಿತ ಹೋರಾಟ ಗಾರರಿಗೆ ಯಾವುದೇ ರೀತಿಯ ಬೆಲೆ ಉಳಿದಿಲ್ಲ ಎಂದು ವಿಷಾದಿಸಿದರು.

ಮರಾಠಿ ದಲಿತ ಸಾಹಿತ್ಯಕ್ಕೆ ಹೋಲಿಸಿದರೆ ಕನ್ನಡ ದಲಿತ ಸಾಹಿತ್ಯ ತುಂಬಾ ಬಡವಾಗಿದೆ. ಪ್ರಮುಖವಾದ ದಲಿತ ಸಾಹಿತಿಗಳು ನಮ್ಮಲ್ಲಿ ಈಗ ಇಲ್ಲ. ದಲಿತ ಲೇಖಕರು ಇದ್ದರೂ ಒಂದೆರಡು ಕೃತಿ ಪ್ರಕಟಿಸಿ ಅದಕ್ಕೆ ಪ್ರಶಸ್ತಿ ಪುರಸ್ಕಾರ ಪಡೆಯಲು ಬಯಸುತ್ತಾರೆ. ಅದು ತಪ್ಪು ಎಂದು ನುಡಿದರು.

ಮುಖ್ಯ ಅತಿಥಿಯಾಗಿದ್ದ ಸಾಹಿತಿ ಪ್ರೊ. ಕಾಳೇಗೌಡ ನಾಗವಾರ ಮಾತನಾಡಿ, ವೀರಪ್ಪಮೊಯಿಲಿ ಒಂದು ಮಹಾಕಾವ್ಯ ಬರೆದರೆ ಅದಕ್ಕೆ ಮನ್ನಣೆ ನೀಡುತ್ತಾರೆ. ಇನ್ನೂ ಕೆಲವರು ನಾಲ್ಕೈದು ಮಹಾಕಾವ್ಯ ಬರೆದು ಆನೆ ಮೇಲೆ ಮೆರವಣಿಗೆ ಮಾಡುತ್ತಾರೆ. ದುಡ್ಡು ಇರುವವರು ಏನೆಲ್ಲಾ ಮಾಡಬಹುದು ಎನ್ನುವುದಕ್ಕೆ ಸಾಹಿತ್ಯ ಕ್ಷೇತ್ರವೂ ಉದಾಹರಣೆಯಾಗಿದೆ. ದುಡ್ಡು ಇರುವವರಿಗೆ ಮಣೆ ಹಾಕುವ ಪ್ರವೃತ್ತಿಯನ್ನು ನಮ್ಮವರು ಬಿಡಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಪ್ರೊ॥ ಎಂ.ಎಚ್. ಕೃಷ್ಣಯ್ಯ ಮಾತನಾಡಿ, ಗೋಷ್ಠಿಯಲ್ಲಿ ಮಂಡಿಸಿರುವ ಪ್ರಬಂಧಗಳಿಗೆ ಅಕಾಡೆಮಿಯಿಂದ ಪುಸ್ತಕ ರೂಪ ನೀಡಲಾಗುವುದು ಎಂದು ಹೇಳಿದರು. ಕೇಂದ್ರದ ನಿರ್ದೇಶಕ ಡಾ॥ ಜೆ. ಸೋಮಶೇಖರ್, ಮಲ್ಲಿಕಾರ್ಜುನಸ್ವಾಮಿ, ನರೇಂದ್ರಕುಮಾರ್ ಹಾಜರಿದ್ದರು.

*ಸೌಜನ್ಯ: ವಿಜಯ ಕರ್ನಾಟಕ*

p



# ರಾಷ್ಟ್ರಕವಿ ಜಿ.ಎಸ್.ಎಸ್. ಅವರಿಗೆ 'ನೃಪತುಂಗ ಸಾಹಿತ್ಯ ಪ್ರಶಸ್ತಿ'ಯ ಗರಿ

**ಬೆಂ**ಗಳೂರು ಮಹಾನಗರ ಸಾರಿಗೆ ಸಂಸ್ಥೆಯು ಸುವರ್ಣ ಕರ್ನಾಟಕ ಆಚರಣೆಯ ಸಂದರ್ಭದಲ್ಲಿ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಗಣನೀಯ ಸಾಧನೆ ಮಾಡಿರುವ ಬರಹಗಾರರಿಗೆ ಪ್ರತಿವರ್ಷವು ಪ್ರಶಸ್ತಿ ಹಾಗೂ ನಗದು ಪುರಸ್ಕಾರವನ್ನು ನೀಡುವುದಕ್ಕಾಗಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಒಂದೂವರೆ ಕೋಟಿ ರೂಪಾಯಿಗಳ ದತ್ತಿಯನ್ನು ಸ್ಥಾಪಿಸಿದೆ.

ಪ್ರತಿವರ್ಷ ಪುರಸ್ಕೃತರ ಆಯ್ಕೆಗಾಗಿ ಕನ್ನಡ ಸಾಹಿತ್ಯ ಪರಿಷತ್ತು ಐದು ಮಂದಿಯ ಆಯ್ಕೆ ಸಮಿತಿಯನ್ನು ರಚಿಸಿ, ಆಯ್ಕೆ ಮಾಡಲಾಗುತ್ತದೆ, ಆಯ್ಕೆ ಸಮಿತಿಯಲ್ಲಿ ಪರಿಷತ್‌ನ ಅಧ್ಯಕ್ಷರು ಹಾಗೂ ಕನ್ನಡ ಮತ್ತು ಸಂಸ್ಕೃತಿಯ ಇಲಾಖೆಯ ಕಾರ್ಯದರ್ಶಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ಮತ್ತು ಮತ್ತಿಬ್ಬರು ನಾಮಕರಣ ಸದಸ್ಯರಿರುತ್ತಾರೆ.

೨೦೦೮ನೇ ಸಾಲಿನ 'ನೃಪತುಂಗ ಸಾಹಿತ್ಯ ಪ್ರಶಸ್ತಿ'ಗೆ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ.

ಫೆಬ್ರವರಿ ೭, ೧೯೨೬ರಂದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದಲ್ಲಿ ಹುಟ್ಟಿದ ಜಿ.ಎಸ್. ಶಿವರುದ್ರಪ್ಪ, ಸೃಜನ, ವಿಮರ್ಶೆ, ಮೀಮಾಂಸೆ, ಅಧ್ಯಯನ, ಅಧ್ಯಾಪನ, ಆಡಳಿತ, ಸಂಘಟನೆ ಈ ಮುಂತಾದ ಸಾಂಸ್ಕೃತಿಕ ನೆಲೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಕನ್ನಡ ಸಂಸ್ಕೃತಿಯ ಚಲನಶೀಲತೆಗೆ ತಮ್ಮ ಕೊಡುಗೆ ನೀಡುತ್ತ ಬಂದ ಮುಖ್ಯರಲ್ಲಿ ಒಬ್ಬರಾಗಿದ್ದಾರೆ.

ಶಿಕ್ಷಕ ತಂದೆಯೊಡನೆ ಸುತ್ತುತ್ತ ಅನೇಕ ಊರುಗಳಲ್ಲಿ ಶಿಕ್ಷಣ ಪಡೆದು ಮೈಸೂರು ಸೇರಿ ವೆಂಕಣ್ಣಯ್ಯ ಕುವೆಂಪು ಅವರ ಒತ್ತಾಸೆಯಲ್ಲಿ ಬಿ.ಎ.(ಆನರ್ಸ್) ಎಂ.ಎ. ಹಾಗೂ ಪಿಎಚ್.ಡಿ. ಪದವಿಗಳನ್ನು ಪಡೆದು ಅಧ್ಯಾಪಕರಾಗಿ ವೃತ್ತಿಜೀವನವನ್ನು ಆರಂಭಿಸಿದರು. ಉಸ್ಮಾನಿಯ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥರಾಗಿ, ಹಾಗೂ ಬೆಂಗಳೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಕೇಂದ್ರದ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ಕನ್ನಡದ ಅತಿ ಪ್ರಭಾವಶಾಲಿ ಅಧ್ಯಾಪಕರ ಪರಂಪರೆಗೆ ಸೇರುವ ಶಿವರುದ್ರಪ್ಪನವರು ಪ್ರಾಚೀನ ಹಾಗೂ ಆಧುನಿಕ ಕನ್ನಡ ಕಾವ್ಯ, ಇಂಗ್ಲಿಷ್ ರೊಮಾಂಟಿಕ್ ಕಾವ್ಯ, ಐರೋಪ್ಯ ನವ್ಯಕಾವ್ಯ, ಪಾಶ್ಚಾತ್ಯ ಮಹಾಕಾವ್ಯ ಹಾಗೂ ತೌಲನಿಕ ಕಾವ್ಯಮೀಮಾಂಸೆ ಮುಂತಾದವು ಅವರ ಆಸಕ್ತಿಯ ವಿಷಯಗಳು.

ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದಲ್ಲಿ ನಿರ್ದೇಶಕರಾಗಿ ಮತ್ತು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಸಾಹಿತ್ಯ ಸಂಬಂಧದ ಚಟುವಟಿಕೆಗಳನ್ನು ಸಂಯೋಜಿಸಿ ಸಂಘಟಿಸಿ ಪ್ರಸಿದ್ಧರಾಗಿದ್ದಾರೆ. ಕನ್ನಡ ವಿಮರ್ಶೆಯ ಬೆಳವಣಿಗೆಗೆ ಅವರ ಕೊಡುಗೆ ಅಪಾರ. 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆಯ' ಸಂಪುಟಗಳು ಮತ್ತು 'ಸಾಹಿತ್ಯ ವಾರ್ಷಿಕ' ಯೋಜನೆಗಳು ಅನನ್ಯವಾದವು.

ಸುಮಾರು ನಲವತ್ತು ವರ್ಷಗಳಿಂದ ಕಾವ್ಯರಚನೆ ಮಾಡುತ್ತಿರುವ ಜಿ.ಎಸ್. ಶಿವರುದ್ರಪ್ಪನವರ ಸುಮಾರು ಹದಿಮೂರು ಕವನ ಸಂಕಲನಗಳನ್ನು ಪ್ರಕಟಿಸಲಾಗಿದೆ. ಪು.ತಿ.ನ. ಹಾಗೂ ಕುವೆಂಪು ಅವರುಗಳಿಂದ ಪ್ರಭಾವಿತರಾಗಿದ್ದಾರೆ. ಕನ್ನಡ ನವೋದಯ, ನವ್ಯ, ಬಂಡಾಯ ಸಾಹಿತ್ಯಕ್ಕೆ ಅಪಾರವಾದ ಕೊಡುಗೆ ನೀಡಿದ್ದಾರೆ. ಸಾಮಗಾನ, ಚೆಲುವು ಒಲವು, ದೇವಶಿಲ್ಪ, ಕಾರ್ತಿಕ, ದೀಪದ ಹೆಜ್ಜೆ, ಗೋಡೆ, ಪ್ರೀತಿ ಇಲ್ಲದ ಮೇಲೆ, ಚಕ್ರಗತಿ ಮುಂತಾದವುಗಳು ಅವರ ಪ್ರಸಿದ್ಧ ಕವನ ಸಂಕಲನಗಳಾಗಿವೆ.

ಕನ್ನಡದ ಉತ್ತಮ ವಿಮರ್ಶಕ ಮತ್ತು ಮೀಮಾಂಸಕರಲ್ಲಿ ಜಿ.ಎಸ್. ಶಿವರುದ್ರಪ್ಪ ಒಬ್ಬರಾಗಿದ್ದಾರೆ. 'ಸೌಂದರ್ಯ ಸಮೀಕ್ಷೆ' ಎಂಬ ಮಹಾಪ್ರಬಂಧ, ಭಾರತೀಯ ಮತ್ತು ಪಾಶ್ಚಾತ್ಯ ಸಾಹಿತ್ಯ ಮೀಮಾಂಸೆಯನ್ನು ಅತ್ಯಂತ ಪ್ರೌಢಶೈಲಿಯಲ್ಲಿ ನಿರೂಪಿಸುವ ವಿಮರ್ಶೆಯ 'ಪೂರ್ವ-ಪಶ್ಚಿಮ', 'ಗತಿಬಿಂಬ', 'ಪರಿಶೀಲನ', 'ಅನುರಣನ', 'ಪ್ರತಿಕ್ರಿಯೆ', 'ಬೆಡಗು', 'ಕಾವ್ಯಾರ್ಥ ಚಿಂತನ' ಎಂಬ ಗ್ರಂಥಗಳು ಶಿವರುದ್ರಪ್ಪನವರ ವಿಮರ್ಶಾ ಪ್ರಜ್ಞೆಗೆ ನಿದರ್ಶನವಾಗಿವೆ.

*(ಮುಂದಿನ ಪುಟಕ್ಕೆ)*

## ಪಾರಿಜಾತದ ನೆಲದಲ್ಲಿ ಸಾಹಿತಿಗಳ ಜಾತ್ರೆ

ಪಾರಿಜಾತದ ನೆಲದಲ್ಲಿ ಸಾಹಿತಿಗಳ ಜಾತ್ರೆ, ಸಾಹಿತ್ಯ ಕ್ಷೇತ್ರದ ಸಾಧಕರು, ದಿಗ್ಗಜರನ್ನು ಅಭಿನಂದಿಸುವ ಅಚ್ಚುಕಟ್ಟಾದ ಸಮಾರಂಭದಲ್ಲಿ ಮದುವೆಯ ದಿಬ್ಬಣವನ್ನು ನೆನಪಿಸಿದ ಸಾಹಿತಿಗಳ ಶೋಭಾಯಾತ್ರೆಗೆ ವರುಣನ ಸಿಂಚನವೂ ನೀಡಿತ್ತು.

ಜನಪದ ಸೊಗಡಿನ ಪಾರಿಜಾತದ ದಿವ್ಯ ಸಂಸ್ಕೃತಿಯನ್ನು ಅಪ್ಪಿಕೊಂಡಿರುವ ಜಮಖಂಡಿ ನಗರದಲ್ಲಿ ನಡೆದ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಪ್ರದಾನ ಸಮಾರಂಭ ಊರ ಹಬ್ಬವಾಗಿ ವಿಜೃಂಭಿಸಿತು.

ಇಡೀ ನಗರದಲ್ಲಿ ಹಬ್ಬದ ವಾತಾವರಣ ಕಂಡುಬಂದಿತ್ತು. ವಿದ್ಯುತ್ ದೀಪಗಳ ಅಲಂಕೃತಗೊಂಡಿದ್ದ ಬೀದಿಯ ಇಕ್ಕೆಲಗಳಲ್ಲಿ ಜಮಖಂಡಿಯ ಸಾಹಿತ್ಯ ಪರಂಪರೆಯನ್ನು ಶ್ರೀಮಂತಗೊಳಿಸಿದ ಪ್ರಾತಃಸ್ಮರಣೀಯರ ಭಾವಚಿತ್ರಗಳ ಗಮನ ಸೆಳೆದವು. ಗೌರವ ಪ್ರಶಸ್ತಿ ಪಡೆದ ಲೇಖಕರ ಕೃತಿಗಳ ವಿಮರ್ಶೆಯ ಗೋಷ್ಠಿ ಸಭಿಕರಿಂದ ತುಂಬಿ ತುಳುಕಿದವು. ಪಾರಿಜಾತದ ಕಲಾವಿದರ ಹಾಡುಗಳು ಲಯಬದ್ಧವಾಗಿ ಮೂಡಿಬಂದವು.

ಸಮಯಕ್ಕೆ ಆದ್ಯತೆ ನೀಡುವಲ್ಲಿ ಸಂಘಟಕರು ಶ್ರಮಿಸಿದ್ದು ವಿಶೇಷವಾಗಿತ್ತು. ಕಾರ್ಯಕ್ರಮದ ಮೊದಲು ಗೌರವ ಪ್ರಶಸ್ತಿ ವಿಜೇತರು, ಪುಸ್ತಕ ಬಹುಮಾನ ಪಡೆದ ಸಾಹಿತಿಗಳನ್ನು ದೇಸಾಯಿ ಸರ್ಕಲ್‌ದಿಂದ ಸಭಾಗೃಹ ಬಸವ ಮಂಟಪದ ವರೆಗೆ ವೈಶಿಷ್ಟ್ಯಪೂರ್ಣ ಮೆರವಣಿಗೆಯಲ್ಲಿ ಕರೆತರಲಾಯಿತು.

ಕರಡಿ ಮಜಲು, ಡೊಳ್ಳಿನ ವಾದ್ಯದ ಮೆರವಣಿಗೆಯಲ್ಲಿ ಸಾಂಪ್ರದಾಯಕ ಪೋಷಾಕು ತೊಟ್ಟು ಪಾಲ್ಗೊಂಡು ಸಾಹಿತಿಗಳಿಗೆ ಶೋಭಾಯಾತ್ರೆ ಮದುವೆ ದಿಬ್ಬಣ ನೆನಪಿಸಿದ್ದರೆ ಆಶ್ಚರ್ಯವಿಲ್ಲ.

## ಪ್ರಶಸ್ತಿ: ಜಿಲ್ಲೆಯವರದ್ದೇ ಮೇಲುಗೈ

ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತರಲ್ಲಿ ಬಾಗಲಕೋಟೆ ಜಿಲ್ಲೆಯದ್ದೇ ಮೇಲುಗೈ.

ಗೌರವ ಪ್ರಶಸ್ತಿ ಪಡೆದ ಐವರಲ್ಲಿ ಇಬ್ಬರು, ಪುಸ್ತಕಗಳಿಗೆ ಬಹುಮಾನ ಪಡೆದ ೧೮ ಸಾಹಿತಿಗಳಲ್ಲಿ ಮೂವರು ಈ ಜಿಲ್ಲೆಯವರೆ.

ಶ್ರೀಮತಿ ಎಚ್.ಎಂ. ಬೀಳಗಿ ಹಾಗೂ ಪ್ರೊ॥ ಮಲ್ಲಿಕಾರ್ಜುನ ಹಿರೇಮಠ ಅವರು ಒಂದೇ ವೇದಿಕೆಯಲ್ಲಿ ಗೌರವ ಪ್ರಶಸ್ತಿ ಹಂಚಿಕೊಂಡರು. ೧೯೭೭ರಲ್ಲಿ ಅವಿಭಜಿತ ವಿಜಾಪುರ ಜಿಲ್ಲೆಯ ಶ್ರೀರಂಗ, ರಂ.ಶ್ರೀ. ಮುಗಳಿ ಅವರು ಪ್ರಶಸ್ತಿ ಹಂಚಿಕೊಂಡಿದ್ದರು.

ಸಂಗಮೇಶ ಕೋಟಿ, ಗಣೇಶ ಅಮೀನಗಡ, ಬಸವರಾಜ ಹೂಗಾರ ಅವರು ಪುಸ್ತಕ ಕೃತಿಗಳಿಗಾಗಿ ಬಹುಮಾನ ಪಡೆದರು.

ಸಾಹಿತ್ಯ ಅಕಾಡೆಮಿ ಸದಸ್ಯ ಡಾ॥ ಬಾಳಾಸಾಹೇಬ ಲೋಕಾಪೂರ, ಸಹಸದಸ್ಯೆ ಶಾರದಾ ಮುಳ್ಳೂರ ಅವರು ಸಾಹಿತಿ, ಕಲಾವಿದರ ಸಂಘಟನೆ ಸಹಯೋಗದೊಂದಿಗೆ ಅತ್ಯಂತ ಅಚ್ಚುಕಟ್ಟಾದ ಕಾರ್ಯಕ್ರಮ ಏರ್ಪಡಿಸಿದ್ದರು.

ಬಸವ ಭವನ ನವವಧುವಿನಂತೆ ಸಿಂಗಾರಗೊಂಡು ಸಾಹಿತಿಗಳ ಸಾಧನೆಯ ಪ್ರಶಂಸೆಗೆ ವೇದಿಕೆಯಾಗಿತ್ತು.

ಉಪ ವಿಭಾಗಾಧಿಕಾರಿ ಕ್ಯಾ. ರಾಜೇಂದ್ರ, ತಹಶೀಲ್ದಾರ ಸಿದ್ದಪ್ಪ, ಕುಲಕರ್ಣಿ, ಮಾಜಿ ಶಾಸಕ ಬಾಬುರಡ್ಡಿ ತುಂಗಳ, ಸುಶೀಲಕುಮಾರ ಬೆಳಗಲಿ, ಕಾಡು ಮಾಳಿ, ಡಾ॥ ಶ್ರೀರಾಮ ಇಟ್ಟಣ್ಣವರ, ಸತ್ಯಾನಂದ ಪಾತ್ರೋಟ, ಎಂ.ಸಿ. ಗೊಂದಿ, ವಾಸಣ್ಣ ದೇಸಾಯಿ, ಏಗಪ್ಪ ಸವದಿ ಮತ್ತಿತರರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

*ಸೌಜನ್ಯ: ಸಂಯುಕ್ತ ಕರ್ನಾಟಕ*

### *ರಾಷ್ಟ್ರಕವಿ ಜಿ.ಎಸ್.ಎಸ್. ಅವರಿಗೆ 'ನೃಪತುಂಗ ಸಾಹಿತ್ಯ ಪ್ರಶಸ್ತಿ'ಯ ಗರಿ*

*(ಹಿಂದಿನ ಪುಟದಿಂದ)*

ಪ್ರವಾಸ ಪ್ರಿಯರಾದ ಜಿ.ಎಸ್. ಶಿವರುದ್ರಪ್ಪ ಅನೇಕ ದೇಶಗಳನ್ನು ಸುತ್ತಿ ಬಂದು ತಮ್ಮ ಪ್ರವಾಸಿ ಅನುಭವವನ್ನು 'ಮಾಸ್ಕೋದಲ್ಲಿ ಇಪ್ಪತ್ತೆರಡು ದಿನ', 'ಗಂಗೆಯ ಶಿಖರಗಳಲ್ಲಿ' ಮತ್ತು 'ಅಮೆರಿಕಾದಲ್ಲಿ ಕನ್ನಡಿಗ' ಎಂಬ ಪ್ರವಾಸ ಕಥನಗಳಲ್ಲಿ ದಾಖಲಿಸಿದ್ದಾರೆ. ಇದಲ್ಲದೆ ವಚನಕಾರ ಸಿದ್ಧರಾಮನನ್ನು ಕುರಿತು "ಕರ್ಮಯೋಗಿ" ಎಂಬ ಜೀವನ ಚರಿತ್ರೆ ಮತ್ತು ತಮ್ಮ ಜೀವನದ ಬೇರೆ ಬೇರೆ ಹಂತಗಳನ್ನು ನೆಲೆಗಳನ್ನು ಗಮನಿಸಿ ಮುಖ್ಯವಾದ ವಿವರಗಳನ್ನು ಬಳಸಿ "ಚತುರಂಗ" ಎಂಬ ಒಂದು ಆತ್ಮಕಥನವನ್ನು ಬರೆದಿದ್ದಾರೆ.

**ಪ್ರಶಸ್ತಿ–ಗೌರವಗಳು :** ಅವರ ಜೀವನ ಸಾಧನೆ ಹಾಗೂ ಸಾಹಿತ್ಯ ಕೃಷಿಗೆ ಅನೇಕ ಗೌರವ ಪುರಸ್ಕಾರಗಳು ದೊರತಿವೆ. ಅವುಗಳಲ್ಲಿ ಮುಖ್ಯವಾದವು. ರಾಷ್ಟ್ರಕವಿ, ಪಂಪ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ೬೧ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ, ಸಾಹಿತ್ಯ ಅಕಾಡೆಮಿ ಅಧ್ಯಕ್ಷತೆ ಮುಂತಾದವು.

ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ವಲಯವನ್ನು ಶ್ರೀಮಂತ ಗೊಳಿಸಿದ ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪನವರು 'ನೃಪತುಂಗ ಸಾಹಿತ್ಯ ಪ್ರಶಸ್ತಿ'ಗೆ ಆಯ್ಕೆಯಾಗಿರುವುದಕ್ಕೆ ಸಾಹಿತ್ಯ ಅಕಾಡೆಮಿಯು ಹೃದಯಪೂರ್ವಕ ಅಭಿನಂದನೆಗಳನ್ನು ಸಲ್ಲಿಸುತ್ತದೆ.

p



ವಿ.ಕೃ. ಗೋಕಾಕ ಜೀವನ ಕುರಿತ
ಚಿತ್ರಸಂಗ್ರಹ ವೀಕ್ಷಿಸುತ್ತಿರುವ ಗಣ್ಯರು

ವಿ.ಕೃ. ಗೋಕಾಕರ 'ಸಮರಸವೇ
ಜೀವನ' ಕೃತಿಯ ಇಂಗ್ಲಿಷ್
ಅನುವಾದ ಕೃತಿ
'ದಿ ಅಗೋನಿ ಅಂಡ್ ಗ್ಲೋರಿ'
ಬಿಡುಗಡೆ ಮಾಡುತ್ತಿರುವ ಡಾ.
ಯು.ಆರ್. ಅನಂತಮೂರ್ತಿ,
ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ,
ಪ್ರೊ. ಎಲ್.ಎಸ್. ಶೇಷಗಿರಿರಾವ್,
ಗೋಕಾಕರ ಪುತ್ರಿ ಯಶೋಧರ
ಮತ್ತು ಗಣ್ಯರು





ಮೈಸೂರಿನಲ್ಲಿ ಜರುಗಿದ
ಮುಳ್ಳೂರು ನಾಗರಾಜ :
'ಸಾಹಿತ್ಯ ಮತ್ತು ಹೋರಾಟ'
ವಿಚಾರ ಸಂಕಿರಣದಲ್ಲಿ
ಭಾಗವಹಿಸಿದ ಅತಿಥಿಗಳು

## ತಿರುವಳ್ಳುವರ್ ಪ್ರತಿಮೆ ಅನಾವರಣಕ್ಕೆ ಬೆಂಬಲ

ತಿರುವಳ್ಳುವರ್ ಪ್ರತಿಮೆ ಅನಾವರಣ ಕುರಿತ ರಾಜ್ಯ ಸರಕಾರದ ನಿಲುವಿಗೆ ಬೆಂಬಲ ಸೂಚಿಸುವುದಾಗಿ ಸಾಹಿತಿ ಡಾ॥ ಯು.ಆರ್. ಅನಂತಮೂರ್ತಿ ತಿಳಿಸಿದ್ದಾರೆ.

ರಾಜ್ಯ ಸಾಹಿತ್ಯ ಅಕಾಡೆಮಿ ಹಾಗೂ ಭಾರತೀಯ ವಿದ್ಯಾಭವನದ ಆಯೋಜಿಸಿದ್ದ 'ವಿ.ಕೃ. ಗೋಕಾಕ್ ಜನ್ಮ ಶತಾಬ್ದಿ' ಕಾರ್ಯಕ್ರಮದಲ್ಲಿ ಗೋಕಾಕ್‌ರ ಸಮರಸವೇ ಜೀವನ ಕೃತಿ ಆಧಾರಿತ 'ದಿ ಆ್ಯಗೊನಿ ಆ್ಯಂಡ್ ಗ್ಲೋರಿ' (ಅನುವಾದ – ಯಶೋಧರ ಭಟ್) ಪುಸ್ತಕ ಬಿಡುಗಡೆ ಮಾಡಿ ಭಾನುವಾರ ಮಾತನಾಡಿ, 'ನನಗೆ ಬಿಜೆಪಿ ಬಗ್ಗೆ ವಿರೋಧವಿದೆ. ಆದರೆ, ತಿರುವಳ್ಳುವರ್ ಪ್ರತಿಮೆ ಸ್ಥಾಪಿಸಲು ಮುಖ್ಯಮಂತ್ರಿಗೆ ಸಹಕಾರ ಕೊಡುತ್ತೇನೆ' ಎಂದರು.

ಕನ್ನಡ ಎಲ್ಲವನ್ನೂ ಒಳಗೊಂಡ ವೈವಿಧ್ಯದ ಭಾಷೆ ಹೀಗಾಗಿ, ತಿರುವಳ್ಳುವರ್ ಪ್ರತಿಮೆ ಸ್ಥಾಪಿಸಲು ವಿರೋಧ ಮಾಡದೆ, ಪಕ್ಷಾತೀತವಾಗಿ ಸಹಕರಿಸಬೇಕು. ಭಾಷಾ ಮಾಧ್ಯಮ ಕುರಿತು ಶಿಕ್ಷಣ ಸಚಿವರು ಉತ್ತಮ ನಿರ್ಧಾರ ತೆಗೆದುಕೊಂಡಿದ್ದಾರೆ. ಹೀಗಾಗಿ, ಈ ವಿಷಯದಲ್ಲೂ ಸರಕಾರಕ್ಕೆ ಬೆಂಬಲವಿದೆ. ಸೈದ್ಧಾಂತಿಕ ಭಿನ್ನಾಭಿಪ್ರಾಯ ಬೇರೆ ಎಂದು ನುಡಿದರು.

ಬೇಂದ್ರೆಯವರ ಶಿಷ್ಯರಾಗಿದ್ದರೂ, ಗೋಕಾಕ್ ಭಿನ್ನವಾಗಿದ್ದರು. ತಮ್ಮ ಘನತೆಯಲ್ಲಿ ನಂಬಿಕೆ ಇಟ್ಟುಕೊಂಡಿದ್ದ ಅವರ ಕೃತಿಯನ್ನು ಪುತ್ರಿ ಯಶೋಧರ ಭಟ್ ಚೆನ್ನಾಗಿ ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ ಎಂದು ಅಭಿಪ್ರಾಯಪಟ್ಟರು.

ರಾಜ್ಯಸಭೆ ಸದಸ್ಯ ನ್ಯಾ. ರಾಮಾಜೋಯಿಸ್ ಮಾತನಾಡಿ, ಮಾಸ್ತಿಯನ್ನು ಕನ್ನಡದ ಆಸ್ತಿ ಎನ್ನುತ್ತೇವೆ. ಹಾಗೆಯೇ ಗೋಕಾಕ್ ಸಮಗ್ರ ಭಾರತದ ಆಸ್ತಿ. ಏಕೀಕರಣವಾದಾಗ ಕರ್ನಾಟಕದಲ್ಲಿ ಮಾತೃ ಭಾಷೆ ಶಿಕ್ಷಣ ಇರಲಿಲ್ಲ. ಗೋಕಾಕ್ ಚಳವಳಿ ಬಳಿಕ ಜಾರಿಗೆ ಬಂತು. ಚಳವಳಿಯಲ್ಲೂ ಭಾಗವಹಿಸಿದ ಗೋಕಾಕ್ ದೊಡ್ಡತನ ತೋರಿದರು ಎಂದು ಹೇಳಿದರು. ಡಾ॥ ಜಿ.ಎಸ್. ಶಿವರುದ್ರಪ್ಪ, ಪ್ರೊ॥ ಎಲ್. ಎಸ್. ಶೇಷಗಿರಿರಾವ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಮನುಬಳಿಗಾರ್, ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಂ.ಎಚ್.ಕೃಷ್ಣಯ್ಯ, ಭಾರತೀಯ ವಿದ್ಯಾಭವನದ ಅಧ್ಯಕ್ಷ ಎನ್. ರಾಮಾನುಜ ಪಾಲ್ಗೊಂಡಿದ್ದರು.

*ಸೌಜನ್ಯ: ವಿಜಯ ಕರ್ನಾಟಕ*

## ಪ್ರಶಸ್ತಿ ಪುರಸ್ಕೃತರ ಸಾಹಿತ್ಯ ಸಾಧನೆ ವಿಚಾರ ಸಂಕಿರಣ

ಪ್ರೊ॥ ಅ.ರಾ. ಮಿತ್ರ ಹಾಸ್ಯ ಸಾಹಿತ್ಯಕ್ಕೆ ರುಚಿ ಶುದ್ಧತೆ ತಂದುಕೊಟ್ಟು ಜೀವನಕ್ಕೆ ನೂತನ ಭಾಷ್ಯ ಬರೆದ ಸಾಹಿತಿ. ಅಶ್ಲೀಲತೆಯ ಸೋಂಕಿಲ್ಲದ ಹಾಸ್ಯ ಸಾಹಿತ್ಯವನ್ನು ಅವರು ರಚಿಸಿದರು. ಕಾವ್ಯದ ಲಯವನ್ನು ಅವರ ಬರಹದಲ್ಲಿ ಗುರುತಿಸಬಹುದು. ಮಿತ್ರರ ಪ್ರಬಂಧಗಳಲ್ಲಿ ಕೇವಲ ಹಾಸ್ಯವಷ್ಟೆ ಅಲ್ಲ ವೈಚಾರಿಕತೆಯನ್ನು ಕಾಣಬಹುದು. ಹಾಸ್ಯ ಸಾಹಿತ್ಯ ಲಲಿತ ಪ್ರಬಂಧದ ಸಾಮ್ರಾಜ್ಯ ವಿಸ್ತರಿಸಿದ ಸಾಹಿತಿ ಪ್ರೊ॥ ಅ.ರಾ. ಮಿತ್ರ ಎಂದು ಡಾ॥ ಬಿವಿ. ವಸಂತಕುಮಾರ ಹೇಳಿದರು.

ನಗರದ ಬಸವ ಭವನದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ೨೦೦೮ರ ಗೌರವ ಪ್ರಶಸ್ತಿ ಪ್ರದಾನ ಸಮಾರಂಭದಂಗವಾಗಿ ಇಂದು ನಡೆದ ಪ್ರಶಸ್ತಿ ಪುರಸ್ಕೃತರ ಸಾಹಿತ್ಯಕ ಸಾಧನೆ ಕುರಿತ ವಿಚಾರ ಸಂಕಿರಣದಲ್ಲಿ ಪ್ರೊ॥ ಅ.ರಾ.ಮಿತ್ರರ ಸಾಹಿತ್ಯ ಸಾಧನೆ ಕುರಿತು ಮಾತನಾಡಿದರು. ಪ್ರೊ॥ ಎಚ್.ಎಂ. ಬೀಳಗಿ ಅವರ ಸಾಹಿತ್ಯ ಸಾಧನೆ ಕುರಿತು ಮಾತನಾಡಿದ ಡಾ॥ ಶಾಂತಾ ಇಮ್ರಾಪೂರ, ಭಾಷಾ ಅಧ್ಯಯನ ಕ್ಷೇತ್ರದಲ್ಲಿ ಬರೆದ ಮಹಿಳೆಯರ ಸಂಖ್ಯೆ ತುಂಬಾ ಕಡಿಮೆ. ಶ್ರೀಮತಿ ಬೀಳಗಿ ಅವರು ಭಾಷಾ ಅಧ್ಯಯನದಂಥ ಕ್ಷೇತ್ರದಲ್ಲೂ ಸಾಧನೆಗೈದಿದ್ದಾರೆ. ಪ್ರಗತಿಶೀಲತೆ, ವೈಚಾರಿಕತೆ ಅವರ ಲೇಖನಗಳಲ್ಲಿ ಎದ್ದು ಕಾಣುತ್ತವೆ. ಶಾಸ್ತ್ರಕ್ಷೇತ್ರದಲ್ಲೂ ಇವರ ಕೊಡುಗೆ ಅನನ್ಯ. ಶರಣ ಸಾಹಿತ್ಯ ಜನಪದ ಸಾಹಿತ್ಯದಲ್ಲೂ ಗುರುತರವಾದ ಕೃಷಿ ಮಾಡಿದ್ದಾರೆ. ವಿಶೇಷವಾಗಿ ಹಿಂದೂ-ಮುಸ್ಲಿಂ ಸಾಮರಸ್ಯದ ಸಂಸ್ಕೃತಿಯನ್ನು ಪ್ರತಿಬಿಂಬಿಸಿದ್ದಾರೆ ಎಂದು ಅಭಿಪ್ರಾಯಪಟ್ಟರು.

ಕವಿತೆ ಬರೆಯುವ ಮೂಲಕ ಸಾಹಿತ್ಯ ಕ್ಷೇತ್ರ ಪ್ರವೇಶಿಸಿದ ಪ್ರೊ॥ ಮಲ್ಲಿಕಾರ್ಜುನ ಹಿರೇಮಠ, ನಾಡಿನ ಸಶಕ್ತ ಬರಹಗಾರರಲ್ಲೊಬ್ಬರು ಎಂದು ಡಾ॥ ವಿಜಯಕುಮಾರ ಕಟಗಿಹಳ್ಳಿಮಠ ಹೇಳಿದರು. ಲಕ್ಷ್ಮಣ ಅವರ ಸಾಹಿತ್ಯ ಸಾಧನೆ ಕುರಿತು ಮಾತನಾಡಿದ ಡಾ॥ ದಡ್ಡಗೆರೆ ನಾಗರಾಜಯ್ಯ, ಲಕ್ಷ್ಮಣ ಸಾಂಸ್ಕೃತಿಕ ಕ್ಷೇತ್ರವನ್ನು ಶ್ರೀಮಂತಗೊಳಿಸಿದರು. ದಲಿತ ಚಳವಳಿಯ ಮೂಲಕ ಲೇಖಕರಾಗಿ ಹೊರಹೊಮ್ಮಿದವರು. ಚಳವಳಿಯ ಅನುಭವದಿಂದ ಸಾಹಿತ್ಯ ಸೃಜಿಸಿದರು. ಲಕ್ಷ್ಮಣರ ಗದ್ಯ ಕಾವ್ಯವಿದ್ದಂತೆ ಎಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ವಿಷ್ಣು ನಾಯ್ಕ ಅವರ ಸಾಹಿತ್ಯ ಸಾಧನೆ ವಿವರಿಸಿದ ಅಂಬಾತನಯ ಮುದ್ರಾಡಿ, ಯಾವ ಕವಿ ಒಬ್ಬನ ಮನಸ್ಸನ್ನು ಬುದ್ಧಿಯನ್ನು, ಹೃದಯವನ್ನು ಮುಟ್ಟುತ್ತಾನೋ ಅವನೇ ನಿಜವಾದ ಕವಿ. ಈ ದಿಸೆಯಲ್ಲಿ ವಿಷ್ಣುನಾಯ್ಕ ನಿಜವಾದ ಕವಿ ಎಂದರು.

ಕರ್ನಾಟಕ ಸಾಹಿತ್ಯ ಅಕಾಡೆಮಿ ಸದಸ್ಯೆ ಶಾರದಾ ಮುಳ್ಳೂರ ಸ್ವಾಗತಿಸಿದರು. ಪ್ರೊ॥ ವಿನಾಯಕ ಕುಲಕರ್ಣಿ ಕಾರ್ಯಕ್ರಮ ನಿರೂಪಿಸಿದರು. ಅಕಾಡೆಮಿ ಸದಸ್ಯ ಬಾಳಾಸಾಹೇಬ ಲೋಕಾಪೂರ ವಂದಿಸಿದರು. ನಂತರ ರೇಣುಕಾ ಮಾಳಾಪುರರಿಂದ ಶ್ರೀಕೃಷ್ಣ ಪಾರಿಜಾತ ಹಾಡುಗಾರಿಕೆ ನಡೆಯಿತು.

# ೨೦೦೭ರಲ್ಲಿ ಪ್ರಕಟವಾದ ೧೮ ಪ್ರಕಾರದ ಅತ್ಯುತ್ತಮ ಕೃತಿಗಳೆಂಬ ಗೌರವಕ್ಕೆ ಅರ್ಹವಾದ ಪುಸ್ತಕಗಳು




ಕಾವ್ಯ

**ಒಡೆಯಲಾರದ ಪ್ರತಿಮೆ**

ಲೇ: ಬಸವರಾಜ ವಕ್ಕುಂದ

ಪುಟ: ೧೦೬, ಬೆ: ರೂ. ೪೦/-

ಪ್ರ: ಕನ್ನಡ ಸಾಹಿತ್ಯ ಪರಿಷತ್ತು
ಪಂಪಮಹಾಕವಿರಸ್ತೆ
ಚಾಮರಾಜಪೇಟೆ, ಬೆಂಗಳೂರು–೧೮



ನಾಟಕ

**ದಾಳ**

ಲೇ: ಎಸ್.ಜಿ. ಸಿದ್ಧರಾಮಯ್ಯ

ಪುಟ: ೮೦, ಬೆಲೆ: ರೂ. ೪೦/-

ಪ್ರ: ಸಚ್ಚಿನ್ ಪಬ್ಲಿಷರ್ಸ್,
ನಂ. ೬೨೪, ೯ನೇ ಡಿ ಮುಖ್ಯರಸ್ತೆ
ಹಂಪಿನಗರ
ವಿಜಯನಗರ, ೨ನೇ ಹಂತ
ಬೆಂಗಳೂರು–೫೬೦ ೧೦೪



ಕಾದಂಬರಿ

**ಯಾದ್ ವಶೇಮ್**

ಲೇ: ನೇಮಿಚಂದ್ರ

ಪುಟ: ೨೮೮, ಬೆಲೆ: ರೂ. ೧೭೫/-

ಪ್ರ: ನವಕರ್ನಾಟಕ ಪಬ್ಲಿಕೇಶನ್ಸ್
ಪ್ರೈವೆಟ್ ಲಿಮಿಟೆಡ್,
ಎಂಬೆಸಿ ಸೆಂಟರ್, ಬೆಂಗಳೂರು–೦೧



ಲಲಿತ ಪ್ರಬಂಧ

**ದೇವರುಗಳ ಟೈಮೇ ಸರಿ ಇಲ್ಲ !**

ಲೇ: ಪ್ರೊ.ಎಚ್.ಎಲ್.ಕೇಶವಮೂರ್ತಿ

ಪುಟ: ೧೧೨, ಬೆಲೆ: ರೂ. ೬೦/-

ಪ್ರ: ಅಭಿರುಚಿ ಪ್ರಕಾಶನ, ನಂ. ೩೮೬
೧೪ನೆಯ ಮುಖ್ಯರಸ್ತೆ,
೩ನೆಯ ಅಡ್ಡರಸ್ತೆ,
ಸರಸ್ವತೀಪುರ, ಮೈಸೂರು–೯



ಸಣ್ಣಕತೆ

**ನನ್ನ ಇನ್ನಷ್ಟು ಕತೆಗಳು**

ಲೇ: ಮಹಮ್ಮದ್ ಕುಳಾಯಿ

ಪುಟ: ೧೨೦, ಬೆಲೆ: ರೂ. ೧೦೦/-

ಪ್ರ: ಕೇಂದ್ರ ಬ್ಯಾರಿ ಸಾಹಿತ್ಯ
ಪರಿಷತ್ (ರಿ)
ಎ.ಪಿ.ಎಸ್. ಆರ್ಕೇಡ್, ಕಂಕನಾಡಿ,
ಮಂಗಳೂರು–೫೭೫೦೦೨



ಪ್ರವಾಸ ಸಾಹಿತ್ಯ

**ದುಬೈ ಎಂಬ ಮಾಯಾನಗರಿ**

ಲೇ: ಸಂಗಮೇಶಕೋಟಿ

ಪುಟ: ೧೧೮, ಬೆಲೆ: ರೂ. ೬೦/-

ಪ್ರ: ಸಂಗಮ ಪ್ರಕಾಶನ
ನವನಗರ, ಹುನಗುಂದ–೫೮೭೧೧೮,
ಬಾಗಲಕೋಟೆ ಜಿಲ್ಲೆ